# ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (ಸಿಸ್ಲೆಪ್), ಕರ್ನಾಟಕ, ಧಾರವಾಡ


ಸ್ಕೂಲ್ ಲೀಡರ್‌ಶಿಪ್ ಅಕಾಡೆಮಿ (SLA-SISLEP), ಧಾರವಾಡ

(ನ್ಯಾಶನಲ್ ಸೆಂಟರ್ ಫಾರ್ ಸ್ಕೂಲ್ ಲೀಡರ್‌ಶಿಪ್ (NCSL-NIEPA), ನವದೆಹಲಿ ಇವರ ಸಹಯೋಗದಲ್ಲಿ)

## ತರಬೇತಿ ಸಾಹಿತ್ಯ ಕೈಪಿಡಿ

## ಸಮಷ್ಠಿ

## ಬಹುತ್ವದ ಭಾರತ ಮತ್ತು ವ್ಯಕ್ತಿ ಘನತೆ



ಸಹಕಾರ

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್), ಹಾವೇರಿ

# ಸಾಹಿತ್ಯ ರಚನಾ ತಂಡ

## ಪರಿಕಲ್ಪನೆ

**ಡಾ. ಬಿ.ಕೆ.ಎಸ್.ವರ್ಧನ್**
ನಿರ್ದೇಶಕರು,
ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣ ಸಂಸ್ಥೆ, ಕರ್ನಾಟಕ (ಸಿಸ್ಲೆಪ್)
ರೊದ್ದ ರಸ್ತೆ, ಡಯಟ್ ಆವರಣ, ಧಾರವಾಡ.

## ಮಾರ್ಗದರ್ಶನ

**ಶ್ರೀ ಗಿರೀಶ ಪದಕಿ**
**ಪ್ರಾಂಶುಪಾಲರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಹಾವೇರಿ**

## ಸಾಹಿತ್ಯ ರಚನಾ ತಂಡ:

ಶ್ರೀ ಕೆ. ಎಂ . ಸುನಿತಾ
ಹಿರಿಯ ಉಪನ್ಯಾಸಕರು ಡಯಟ್ ,ಹಾವೇರಿ

ಶ್ರೀ ಬಿ . ಶ್ರೀನಿವಾಸ
ಮುಖ್ಯಶಿಕ್ಷಕರು ಜಿ ಎಚ್ ಎಸ್ ಬನ್ನೂರ

ಶ್ರೀ ಜಹೀರ್ ಅಬ್ಬಾಸ ಶಿರಳ್ಳಿ
ಮುಖ್ಯ ಶಿಕ್ಷಕರು ಜಿ ಯು ಎಚ್ ಎಸ್ ತಡಸ

ಶ್ರೀ ಲಕ್ಷ್ಮಣ ಕಾಳಿ
ಸ.ಪ್ರೌ.ಶಾಲೆ ಹಿರೇಮಾಗನೂರು

## ಎಸ್.ಎಲ್.ಎ – ಸಿಸ್ಲೆಪ್ ತಂಡ

- ಶ್ರೀಮತಿ ಎ.ಎನ್ ಶೀಲಾ, ಹಿರಿಯ ಸಹಾಯಕ ನಿರ್ದೇಶಕರು
- ಶ್ರೀಮತಿ ಸ್ವರೂಪಶೀಲಾ ಹೆಚ್ ವಿ, ಉಪನ್ಯಾಸಕರು
- ಶ್ರೀ ಮಹಾವೀರ ಹಂಚಿನಾಳ, ಸಹಾಯಕ ನಿರ್ದೇಶಕರು
- ಡಾ. ಪೂರ್ಣಿಮಾ ಮುಕ್ಕುಂದಿ, ಉಪನ್ಯಾಸಕರು
- ಡಾ. ಎನ್ ಹೆಚ್ ಪೂಜಾರ, ಉಪನ್ಯಾಸಕರು
- ಶ್ರೀಮತಿ ದೇವೀರಮ್ಮ ಎಸ್, ಉಪನ್ಯಾಸಕರು

# ನಿರ್ದೇಶಕರ ಆಶಯ ನುಡಿಗಳು




ಡಾ.ಬಿ.ಕೆ.ಎಸ್.ವರ್ಧನ್
ನಿರ್ದೇಶಕರು
ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು
ನಿರ್ವಹಣಾ ಸಂಸ್ಥೆ (ಸಿಸ್ಲೆಪ್),
ಕರ್ನಾಟಕ, ಧಾರವಾಡ


ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆ–2009 ರ ಪ್ರಕಾರ ದೇಶದ ಪ್ರತಿಯೊಂದು ಅರ್ಹ ಮಗುವಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಖಚಿತ ಪಡಿಸುವುದು ಸಾಂವಿಧಾನಿಕ ಹೊಣೆಗಾರಿಕೆಯಾಗಿದೆ. ಅರ್ಹ ವಯೋಮಾನದ 6 ರಿಂದ 14 ವರ್ಷದ ಎಲ್ಲಾ ಮಕ್ಕಳಿಗೆ ಎಂಟು ವರ್ಷಗಳ ಗುಣಾತ್ಮಕ ಶಿಕ್ಷಣವನ್ನು ನಮ್ಮ ಶಾಲೆಗಳಲ್ಲಿ ಖಾತರಿಪಡಿಸುವುದು ಶಾಲಾ ಶಿಕ್ಷಣ ವ್ಯವಸ್ಥೆಯ ಹೊಣೆಗಾರಿಕೆಯಾಗಿದೆ. ಈ ಹಿನ್ನಲೆಯಲ್ಲಿ ಕರ್ನಾಟಕ ಸರಕಾರವು ಅನೇಕ ಉಪಕ್ರಮಗಳನ್ನು ಜಾರಿಗೆ ತಂದಿದೆ. ಶಿಕ್ಷಕರಿಗೆ ಬೆಂಬಲ ವ್ಯವಸ್ಥೆಯಾಗಿ ಕಾರ್ಯ ನಿರ್ವಹಿಸುವ ಶೈಕ್ಷಣಿಕ ಆಡಳಿತಗಾರರ ಮಾರ್ಗದರ್ಶನ, ಹಿಮ್ಮಾಹಿತಿ ಹಾಗೂ ಅನುಪಾಲನೆಯು ಕಾರ್ಯಕ್ಷೇತ್ರದಲ್ಲಿ ಅಗತ್ಯವಾಗಿದೆ. ಇರುವುದನ್ನು ಸರಿಯಾಗಿ ಅನುಷ್ಠಾನವಾಗುವಂತೆ ಮಾಡಬೇಕಾದರೆ ಇಲಾಖಾ ಕಾರ್ಯಕ್ರಮಗಳ ಕುರಿತಂತೆ ನಮ್ಮ ಅರ್ಥೈಸಿಕೊಳ್ಳುವಿಕೆ ಹೇಗಿರಬೇಕು ಎಂದು ಅರಿಯುವುದು ಮುಖ್ಯವಾಗಿದೆ. ಈ ಪ್ರಯುಕ್ತ ಶೈಕ್ಷಣಿಕ ಆಡಳಿತಗಾರರು ಇಲಾಖಾ ಕಾರ್ಯಕ್ರಮಗಳ ಮೂಲ ಆಶಯ ಹಾಗೂ ಕಾಳಜಿಯನ್ನು ಅರ್ಥೈಸಿಕೊಂಡು ಶಿಕ್ಷಣದ ಗುಣಾತ್ಮಕತೆಯ ನೆಲೆಯನ್ನು ವಿಸ್ತರಿಸುವ ನಿಟ್ಟಿನಲ್ಲಿ ಶಿಕ್ಷಣದ ಗುರಿಗಳನ್ನು ಶಾಲೆಗಳಲ್ಲಿ ಸಾಕಾರಗೊಳಿಸುವ ಮೂಲಕ ನ್ಯಾಯಯುತ, ಸಮಾನತೆಯ, ಮಾನವೀಯ ಮತ್ತು ಸುಸ್ಥಿರ ಸಮಾಜ ನಿರ್ಮಾಣ ಮಾಡಬೇಕಾಗಿದೆ.

ಶೈಕ್ಷಣಿಕ ಆಡಳಿತಗಾರರಿಗೆ ನಾಯಕತ್ವ ತರಬೇತಿ ನೀಡುವ ಜವಾಬ್ದಾರಿಯನ್ನು ಸರ್ಕಾರವು ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (ಸಿಸ್ಲೆಪ್), ಕರ್ನಾಟಕ, ಧಾರವಾಡ – ಈ ಸಂಸ್ಥೆಗೆ ನೀಡಿದೆ. ಈ ಹಿನ್ನೆಲೆಯಲ್ಲಿ ಶೈಕ್ಷಣಿಕ ಆಡಳಿತಗಾರರಿಗೆ ಜ್ಞಾನ, ಕೌಶಲ, ಶೈಕ್ಷಣಿಕ ದೃಷ್ಟಿಕೋನ ಹಾಗೂ ಮನೋಭಾವದ ಅಂಶಗಳನ್ನು ಒಳಗೊಂಡಂತೆ ಹಲವಾರು ಆಯಾಮಗಳುಳ್ಳ ಆಡಳಿತಾತ್ಮಕ ಹಾಗೂ ಶೈಕ್ಷಣಿಕ ಸಾಮರ್ಥ್ಯಾಭಿವೃದ್ಧಿಯ ಒಟ್ಟು ಹನ್ನೆರೆಡು ತರಬೇತಿ ಸಾಹಿತ್ಯಗಳನ್ನು ಪ್ರಸಕ್ತ ಸಾಲಿನಲ್ಲಿ ಸಿದ್ಧಪಡಿಸಲಾಗಿದೆ. ಶೈಕ್ಷಣಿಕ ಆಡಳಿತಗಾರರು ತಮ್ಮ ಕಾರ್ಯಕ್ಷಮತೆ, ದಕ್ಷತೆಯೊಂದಿಗೆ ಎಲ್ಲರಿಗೂ ಮಾರ್ಗದರ್ಶನ ಮಾಡುವ ಸಾಮರ್ಥ್ಯ ಹೊಂದಿರಬೇಕಾದುದು ಅಗತ್ಯವಾಗಿದೆ. ಗುಣಾತ್ಮಕ ಕಲಿಕೆಯ ಮೂಲಕ ವಿದ್ಯಾರ್ಥಿಗಳ ಉಜ್ವಲ ಭವಿಷ್ಯ ರೂಪಗೊಳ್ಳುವಂತೆ ಮಾಡಲು ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಈ ತರಬೇತಿ ಸಾಹಿತ್ಯಗಳು ಸಹಾಯಕವಾಗಿವೆ.

2023–24 ನೇ ಸಾಲಿನಲ್ಲಿ ನ್ಯಾಷನಲ್ ಸೆಂಟರ್ ಫಾರ್ ಸ್ಕೂಲ್ ಲೀಡರ್‌ಶಿಪ್ (ಓಅಖಐ), ದೆಹಲಿ ಇವರು ಮಾಡ್ಯೂಲ್‌ಗಳ ರಚನೆಗಾಗಿರೂ. 65000/– ಗಳನ್ನು ಬಿಡುಗಡೆ ಮಾಡಿದ್ದು, ಈ ಅನುದಾನದಲ್ಲಿ ಶಾಲಾ ಶಿಕ್ಷಣ ಇಲಾಖೆಯ ವಿವಿಧ ಸ್ತರದ ಅಧಿಕಾರಿಗಳಿಗೆ ನಾಯಕತ್ವ ಹಾಗೂ ಶೈಕ್ಷಣಿಕ ಕ್ಷೇತ್ರಗಳಿಗೆ ಅವಶ್ಯವಿರುವ ಹನ್ನೆರೆಡು ವಿಷಯಗಳ

ಮಾಡ್ಯೂಲ್‌ಗಳನ್ನು ರಚಿಸಲು ನಿರ್ಧರಿಸಲಾಯಿತು. ಈ ಮಾಡ್ಯೂಲ್‌ಗಳ ರಚನೆಗಾಗಿ ಧಾರವಾಡ, ಬೆಳಗಾವಿ, ಹಾವೇರಿ, ಗದಗ,ಇಳಕಲ್, ವಿಜಯಪುರ, ತುಮಕೂರು, ಚಿಕ್ಕಮಗಳೂರು, ಬೆಂಗಳೂರು ಗ್ರಾಮೀಣ, ಮೈಸೂರು, ಕೊಲಾರ ಡಯೆಟ್‌ಗಳನ್ನು ಆಯ್ಕೆ ಮಾಡಿಕೊಂಡು ಪ್ರತಿಯೊಂದು ಡಯೆಟ್‌ಗೆ ತಲಾ ರೂ.5000/– ಗಳನ್ನು ಬಿಡುಗಡೆ ಮಾಡಿ, ಒಂದೊಂದು ವಿಷಯದ ತರಬೇತಿ ಸಾಹಿತ್ಯ ರಚನೆಯ ಜವಾಬ್ದಾರಿಯನ್ನು ನೀಡಲಾಯಿತು. ಅವರಿಂದ ಸಿದ್ಧಪಡಿಸಲಾದ ಮಾಡ್ಯೂಲ್‌ಗಳನ್ನು ಸಿಸ್ಲೆಪ್‌ನ ಅಧಿಕಾರಿ ವೃಂದ, ವಿಷಯ ಪರಿಣಿತರು ಹಾಗೂ ಸಂಬಂಧಿಸಿದ ಡಯೆಟ್‌ನ ಸಿಬ್ಬಂದಿಗಳೊಂದಿಗೆ ಚರ್ಚಿಸಿ ಪುನರ್ ಪರಿಶೀಲಿಸುವ ಮೂಲಕ ಇನ್ನಷ್ಟು ಉತ್ತಮೀಕರಿಸಿ ಅಂತಿಮಗೊಳಿಸಲಾಯಿತು.

ಪ್ರಸ್ತುತ ತರಬೇತಿ ಸಾಹಿತ್ಯಗಳು ಅಂತಿಮ ರೂಪವನ್ನು ಪಡೆಯಲು ಕಾರಣೀಭೂತರಾದ ಶಾಲಾ ಶಿಕ್ಷಣ ಇಲಾಖೆಯ ಎಲ್ಲ ಅಧಿಕಾರಿಗಳ, ಸಂಪನ್ಮೂಲ ವ್ಯಕ್ತಿಗಳ, ಶಿಕ್ಷಕರ ಹಾಗೂ ಬೋಧಕೇತರ ವೃಂದದವರ ಸಹಕಾರ ಹಾಗೂ ಪ್ರಯತ್ನವು ಅಭಿನಂದನಾರ್ಹವಾಗಿದೆ. ಎಲ್ಲ ಅರ್ಹ ಮಕ್ಕಳಿಗೂ ಗುಣಾತ್ಮಕ ಶಿಕ್ಷಣವನ್ನು ಖಾತರಿಪಡಿಸಲು, ಶಿಕ್ಷಣದ ದೂರಗಾಮಿ ಗುರಿಗಳನ್ನು ಸಾಕಾರಗೊಳಿಸಲು, ಸುಸ್ಥಿರ ಹಾಗೂ ಸಮಾನತೆಯ ಸಮಾಜ ನಿರ್ಮಾಣ ಮಾಡಲು, ಹೊಸ ಸಾಧ್ಯತೆಗಳನ್ನು ಸೃಷ್ಟಿಸಲು ನಮ್ಮ ಮೇಲ್ವಿಚಾರಕ ಅಧಿಕಾರಿಗಳಿಗೆ ಈ ತರಬೇತಿ ಸಾಹಿತ್ಯಗಳು ನೆರವಾಗುತ್ತವೆಂದು ಆಶಿಸುತ್ತೇನೆ.

ದಿನಾಂಕ: 25, ಮಾರ್ಚ, 2025 (ಡಾ.ಬಿ.ಕೆ.ಎಸ್.ವರ್ಧನ್)

## ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (SISLEP) ಯ ಪರಿಚಯ:

ಕರ್ನಾಟಕ ಸರಕಾರವು ಸಂವಿಧಾನದ ಆಶಯ ಮತ್ತು ಜಾಗತಿಕ ಚಿಂತನೆಗಳಿಗೆ ಅನುಗುಣವಾಗಿ ಸ್ವಾಯತ್ತತೆ ಹಾಗೂ ಸ್ವಯಂ ಆಡಳಿತವನ್ನು ಜಾರಿಗೆ ತರಲು ಶಿಕ್ಷಣಾಧಿಕಾರಿಗಳ ಹಾಗೂ ಶಾಲಾ ಮುಖ್ಯಸ್ಥರ ಮನೋಭಾವ, ದೃಷ್ಟಿಕೋನ ಹಾಗೂ ಆಚರಣೆಗಳಲ್ಲಿ ಬದಲಾವಣೆಗಳನ್ನು ತರುವ ಉದ್ದೇಶದಿಂದ ಶಾಲಾ ಮಟ್ಟದಿಂದ ರಾಜ್ಯ ಮಟ್ಟದವರೆಗಿನ ಅಧಿಕಾರಿಗಳಿಗೆ ಅಗತ್ಯವಾದ ಸಾಮರ್ಥ್ಯಾಭಿವೃದ್ಧಿಯನ್ನು ಮಾಡುವ ಸಲುವಾಗಿ 1986 ರಾಷ್ಟ್ರೀಯ ಶಿಕ್ಷಣ ನೀತಿ ಹಾಗೂ 1992 ರ ಕಾರ್ಯಾನುಸರಣ ಯೋಜನೆ (Programme of action - POA) ಗಳ ಶಿಫಾರಸ್ಸುಗಳನ್ವಯ 2010ರಲ್ಲಿ 'ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (State Institute of School Leadership, Educational Planning and Management (SISLEP) ಯನ್ನು ಸ್ಥಾಪಿಸಿತು. 2011 ರಲ್ಲಿ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮದಡಿಯಲ್ಲಿ ಈ ಸಂಸ್ಥೆಯನ್ನು ನೋಂದಾಯಿಸಲಾಗಿದ್ದು, 'ಕನ್ನಡದ ದೀಪ'ಎಂದು ಹೆಸರಾಗಿರುವ ಡೆಪ್ಯೂಟಿ ಚನ್ನಬಸಪ್ಪನವರು ಕಟ್ಟಿ ಬೆಳೆಸಿದ ಧಾರವಾಡದ ಜಿಲ್ಲಾ ಶಿಕ್ಷಕರ ತರಬೇತಿ ಸಂಸ್ಥೆ, ಡಯಟ್ ಆವರಣದಲ್ಲಿ ಪ್ರಸ್ತುತ ಈ ಸಂಸ್ಥೆಯು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ.



**ಸಂಸ್ಥೆಯ ದೂರದರ್ಶಿತ್ವ:**

**" ಶಾಲಾ ನಾಯಕತ್ವದಲ್ಲಿ ಮಾರ್ಗದರ್ಶಿ ಅಧಿಕಾರಿಗಳ ಬಲವರ್ಧನೆ "**

**ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ ಡಯಟ್ ಆವರಣ, ಕಾಲೇಜು ರಸ್ತೆ, ಧಾರವಾಡ – 580008**

**ದೂರವಾಣಿ: 08362441129 ಇ–ಮೇಲ್: sislepdirector.dwd@gmail.com**

ನಮ್ಮ ದೇಶದ ಶಾಲಾ ಶಿಕ್ಷಣ ಕ್ಷೇತ್ರವು ಇಡೀ ಜಗತ್ತಿನಲ್ಲಿಯೇ ವಿಸ್ತೃತವಾದುದಾಗಿದೆ. ಶಾಲಾ ಹಂತದಿಂದ ರಾಜ್ಯ ಮಟ್ಟದವರೆಗೆ ಶಿಕ್ಷಕರು, ವಿವಿಧ ಸ್ತರದ ಇಲಾಖಾ ಮೇಲ್ವಿಚಾರಕರು ಮತ್ತು ಅಧಿಕಾರಿಗಳು ಸಮುದಾಯದ ಸಹಭಾಗಿತ್ವದ ಮೂಲಕ ಶಾಲಾ ಶಿಕ್ಷಣದ ಗುರಿಯನ್ನು ತಲುಪುವಲ್ಲಿ ಶ್ರಮಿಸುತ್ತಿದ್ದಾರೆ. ಕರ್ನಾಟಕ ರಾಜ್ಯವೊಂದರಲ್ಲಿಯೇ 2024–25 ನೇ
ಸಾಲಿನಲ್ಲಿ ಒಂದನೇ ತರಗತಿಯಿಂದ 10ನೇ ತರಗತಿಯವರೆಗೆ ಅಂದಾಜು ಒಂದು ಕೋಟಿಗೂ ಅಧಿಕ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.ಈ ಬೃಹತ್ತಾದ ಶಿಕ್ಷಣ ವ್ಯವಸ್ಥೆಯು ಪರಿಣಾಕಾರಿಯಾಗಿ ಕೆಲಸ ಮಾಡುವಂತಾಗಲು, ಸ್ಥಳೀಯ ಅಗತ್ಯತೆಗಳು ಮತ್ತು ಜಾಗತಿಕ ಚಿಂತನೆಗಳಿಗೆ ಸೇತುವೆಯನ್ನು ಕಟ್ಟಲು ಸ್ವಾಯತ್ತತೆಯುಳ್ಳ, ಕ್ರಿಯಾಶೀಲವಾದ ಹಾಗೂ ಸಮರ್ಥ ಸಮುದಾಯದ ಅಗತ್ಯವಿದ್ದು, ಇಂತಹ ಒಂದು ಸಮುದಾಯವನ್ನು ಆಡಳಿತ ವಿಕೇಂದ್ರೀಕರಣದ ಮೂಲಕ ರೂಪಿಸಬೇಕು ಎನ್ನುವುದು ಸಂವಿಧಾನದ ಆಶಯವಾಗಿದೆ.

ಜಾಗತಿಕ ಹಂತದಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ ಪೂರಕವಾಗಿ ಕೆಲಸ ಮಾಡುತ್ತಿರುವ ಯುನೆಸ್ಕೊ, ಶೈಕ್ಷಣಿಕ ಯೋಜನೆಗಳನ್ನು ರೂಪಿಸಲು ಮತ್ತು ನಿರ್ವಹಣೆ ಮಾಡಲು ವಿಶಿಷ್ಟವಾದ ಹಾಗೂ ವಿಭಿನ್ನವಾದ ಸಾಮರ್ಥ್ಯಗಳ ಅಗತ್ಯವಿದೆ ಎಂಬುದನ್ನು ತಿಳಿಸುವುದಲ್ಲದೇ, 'ಇಲಾಖೆ' ಮತ್ತು 'ಸಮುದಾಯದ ಸಹಭಾಗಿತ್ವ' ದಲ್ಲಿ 'ಯೋಜನೆ ಮತ್ತು ನಿರ್ವಹಣೆ ' ಯನ್ನು ನಿಭಾಯಿಸಬೇಕು ಎನ್ನುವುದು ಇದರ ನಿಲುವಾಗಿದೆ.

ಈ ಹಿನ್ನೆಲೆಯಲ್ಲಿ 1986 ಹಾಗೂ 1992 ರ ರಾಷ್ಟ್ರೀಯ ಶಿಕ್ಷಣ ನೀತಿಗಳು ಶೈಕ್ಷಣಿಕ ಕ್ಷೇತ್ರದಲ್ಲಿ ನಿರ್ವಹಣೆಗೆ ಪ್ರಾಮುಖ್ಯತೆಯನ್ನು ನೀಡಿವೆ. ಇದರನ್ವಯ ಎಲ್ಲ ರಾಜ್ಯಗಳಲ್ಲಿ ರಾಜ್ಯ ಹಂತದಲ್ಲಿ SIEMAT (State institute for Educational Management, Administration and Training) ನ್ನು ಸ್ಥಾಪನೆ ಮಾಡಲು ಶಿಫಾರಸ್ಸು ಮಾಡಲಾಯಿತು. ಕರ್ನಾಟಕ ರಾಜ್ಯದಲ್ಲಿ 'SIEMAT' ಹೆಸರಿನ ಬದಲಾಗಿ 2010–11 ರಲ್ಲಿ ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (SISLEP-State Institute for School Leadership Educational Planning and Management) ಎಂಬ ಹೆಸರಿನಲ್ಲಿ ಸಂಸ್ಥೆಯು ಪ್ರಾರಂಭವಾಯಿತು. 'ಸಿಸ್ಲೆಪ್' ಕರ್ನಾಟಕ ಸೊಸೈಟಿಗಳ ಕಾಯ್ದೆಯ ಅಡಿಯಲ್ಲಿ
ನೋಂದಣಿಯಾಗಿರುವ ಸ್ವಾಯತ್ತ ಸಂಸ್ಥೆಯಾಗಿದ್ದು, ಇದರ ವ್ಯವಸ್ಥಾಪನೆ ಹಾಗೂ ಕಾರ್ಯಕ್ರಮಗಳ ರೂಪುರೇಷೆಗಳನ್ನು ಆಡಳಿತ ಮಂಡಳಿ ಹಾಗೂ ಕಾರ್ಯ ನಿರ್ವಾಹಕ ಮಂಡಳಿಗಳ ಮೇಲುಸ್ತುವಾರಿಯಲ್ಲಿ ನಿರ್ವಹಿಸಲಾಗುತ್ತದೆ. ಸಂಸ್ಥೆಯಲ್ಲಿ ಪ್ರಮುಖವಾಗಿ ಐದು ವಿಭಾಗಗಳಲ್ಲಿ ಕ್ರಿಯಾಯೋಜನೆಯನ್ನು ರೂಪಿಸಿ ಶಾಲಾ ನಾಯಕತ್ವ ತರಬೇತಿ, ಸಂಶೋಧನೆ ಮತ್ತು ನಾವಿನ್ಯತಾ ಉಪಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

**ತಾತ್ವಿಕ ಹಿನ್ನೆಲೆ ಹಾಗೂ ಕಾರ್ಯವ್ಯಾಪ್ತಿ:**

- ಶೈಕ್ಷಣಿಕ ಆಡಳಿತವನ್ನು ವಿಕೇಂದ್ರೀಕರಿಸುವುದು.
- ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣೆಯ ವ್ಯವಸ್ಥೆಯ ಆಮೂಲಾಗ್ರ ಬದಲಾವಣೆ.
- ದೇಶದ ಅಭಿವೃದ್ಧಿ ಹಾಗೂ ಅಗತ್ಯತೆಗಳಿಗನುಸಾರವಾಗಿ ಶೈಕ್ಷಣಿಕ ದೃಷ್ಟಿಕೋನವನ್ನು ರೂಪಿಸುವುದು ಮತ್ತು ದೀರ್ಘಕಾಲಿಕ ಶೈಕ್ಷಣಿಕ ಯೋಜನೆಗಳನ್ನು ಸಿದ್ಧಪಡಿಸುವುದು.
- ಶಿಕ್ಷಣಕ್ಕೆ ಸಂಬಂಧಿಸಿದಂತೆ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳ ನಡುವೆ ಸಂಪರ್ಕ ಸಾಧಿಸುವುದು.
- ಶೈಕ್ಷಣಿಕ ಸಂಸ್ಥೆಗಳ ಮುಖ್ಯಸ್ಥರು ಹಾಗೂ ಆಡಳಿತಗಾರರಲ್ಲಿ ನಾಯಕತ್ವ ಕೌಶಲ್ಯ ಮತ್ತು ನಿರ್ವಹಣಾ ಸಾಮರ್ಥ್ಯಗಳನ್ನು ಬೆಳೆಸುವುದು

ಮೇಲ್ಕಂಡ ಕಾರ್ಯಗಳನ್ನು ನಿರ್ವಹಣೆ ಮಾಡಲು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು 'ಶೈಕ್ಷಣಿಕ ಆಡಳಿತಗಾರರ ಸಾಮರ್ಥ್ಯ ಅಭಿವೃದ್ಧಿ ಸಂಸ್ಥೆ' (SIEMAT) ಯನ್ನು ಸ್ಥಾಪಿಸಲು ತೊಂಭತ್ತರ ದಶಕದಲ್ಲಿ ನಿರ್ಧರಿಸಿತು. ಆರಂಭದಲ್ಲಿ 'ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ' (ಡಿ.ಪಿ.ಇ.ಪಿ) ಇದ್ದ ರಾಜ್ಯಗಳಿಗೆ ಮಾತ್ರ ಸೀಮಿತವಾಗಿದ್ದ SIEMAT ಗಳನ್ನು 2001–02 ರಲ್ಲಿ ಸರ್ವ ಶಿಕ್ಷಣ ಅಭಿಯಾನದ ವ್ಯಾಪ್ತಿಗೆ ತಂದು ದೇಶದ ಎಲ್ಲ ರಾಜ್ಯಗಳಲ್ಲಿ ಸ್ಥಾಪನೆ ಮಾಡಲು ನಿರ್ದೇಶಿಸಲಾಯಿತು.

ಕರ್ನಾಟಕ ರಾಜ್ಯವು ತನ್ನ ಅನುಭವಗಳು, ಕಲಿಕೆಗಳು ಹಾಗು ಅಧ್ಯಯನ ವರದಿಗಳ ಮೂಲಕ ಶೈಕ್ಷಣಿಕ ನಿರ್ವಹಣೆಯ ಅಗತ್ಯವನ್ನು ಕಂಡುಕೊಂಡಿತ್ತು. 2000ರಲ್ಲಿ ಮುಖ್ಯ ಮಂತ್ರಿಗಳ ಟಾಸ್ಕ್ ಫೋರ್ಸ್ ವರದಿ, 2000ರಲ್ಲಿ ಆಡಳಿತ ಸುಧಾರಣೆ ಆಯೋಗದ ವರದಿ, 2002ರಲ್ಲಿ ಶೈಕ್ಷಣಿಕ ದೃಷ್ಟಿಕೋನ ವರದಿಗಳು ಶೈಕ್ಷಣಿಕ ವಿಕೇಂದ್ರೀಕರಣ ಮತ್ತು ಅದಕ್ಕೆ ಬೇಕಾದ ಸಾಮರ್ಥ್ಯಾಭಿವೃದ್ಧಿಯ ಅಗತ್ಯಗಳನ್ನು ಸ್ಪಷ್ಟವಾಗಿ ಗುರುತಿಸಿದವು. ಅಷ್ಟೇ ಅಲ್ಲ ಜಾಗತಿಕ ಮಟ್ಟದಲ್ಲಿ ಪ್ರಯೋಗಗಳ ಮೂಲಕ ಪರಿಣಾಮಕಾರಿ ಎಂದು ಸಾಬೀತಾಗಿದ್ದ 'ಸ್ವಯಂ ಆಡಳಿತ ಶಾಲೆ (Autonomous Schools)' ಗಳ ಪರಿಕಲ್ಪನೆಯನ್ನು ಈ ವರದಿಗಳು ಬೆಂಬಲಿಸಿದ್ದವು.

2003ರಲ್ಲಿ ಶೈಕ್ಷಣಿಕ ಉತ್ಕೃಷ್ಟತೆ ಸಾಧಿಸಲು ನೀತಿ ನಿರೂಪಣೆಗೆ ಬೆಂಬಲ ಒದಗಿಸುವುದಕ್ಕೆ ಸಂಬಂಧಿಸಿದಂತೆ ಅಜೀಂ ಪ್ರೇಮ್‌ಜಿ ಫೌಂಡೇಶನ್‌ನೊಂದಿಗೆ ಒಡಂಬಡಿಕೆ ಮಾಡಿಕೊಂಡ ರಾಜ್ಯ ಸರಕಾರ, ಶಿಕ್ಷಣ ಇಲಾಖೆಯಲ್ಲಿ ಪಾಲಿಸಿ ಪ್ಲ್ಯಾನಿಂಗ್ ಘಟಕವನ್ನು ಸ್ಥಾಪಿಸಿತು. ಶೈಕ್ಷಣಿಕ ನಾಯಕತ್ವ ಮತ್ತು ನಿರ್ವಹಣೆ, ಅಭಿವೃದ್ಧಿ ಯೋಜನೆಗಳನ್ನು, ಶಿಕ್ಷಣ ವ್ಯವಸ್ಥೆಯಲ್ಲಿ ಸಮುದಾಯದ ಭಾಗವಹಿಸುವಿಕೆಯನ್ನು ಹೆಚ್ಚಿಸುವಂತಹ ಕಾರ್ಯಕ್ರಮಗಳನ್ನು, ಇಲಾಖಾ ಯೋಜನೆಯ ಪರಿಣಾಮಗಳನ್ನು ಕುರಿತು ಅಧ್ಯಯನಗಳನ್ನು ಹಮ್ಮಿಕೊಂಡಿತು. ಶೈಕ್ಷಣಿಕ ವಿಕೇಂದ್ರೀಕರಣಕ್ಕೆ ಪೂರಕವಾದ ಶಿಫಾರಸ್ಸುಗಳನ್ನು ಮಾಡಿತು. 2008 ರಲ್ಲಿ ಕೇಂದ್ರ ಸರ್ಕಾರದ ಅನುಮೋದನೆಯೊಂದಿಗೆ 2010ರಲ್ಲಿ ' ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ' (**SISLEP**) ಯನ್ನು ಸ್ಥಾಪಿಸಲಾಯಿತು. 2011 ರಲ್ಲಿ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮದಡಿಯಲ್ಲಿ ಈ ಸಂಸ್ಥೆಯು ನೋಂದಾಯಿಸಲ್ಪಟ್ಟಿದ್ದು, ತದನಂತರದಲ್ಲಿ NIEPA / NCSL ನವದೆಹಲಿಯಿಂದ 2017–18 ರಲ್ಲಿ ಸಿಸ್ಲೆಪ್ ಸಂಸ್ಥೆಯಲ್ಲಿ 'ಶಾಲಾ ನಾಯಕತ್ವ ಅಕಾಡಮಿ' (SLA) ಯನ್ನು ಸ್ಥಾಪಿಸಲಾಗಿದೆ. ಈ ಅಕಾಡಮಿಯು ಉತ್ತಮ ಶೈಕ್ಷಣಿಕ ಅಭ್ಯಾಸಗಳ ವಿಡಿಯೋ ಹಾಗೂ ಯಶೋಗಾಥೆಗಳ ದಾಖಲೀಕರಣ, ಮಾಡ್ಯೂಲ್‌ಗಳ ರಚನೆ ಮತ್ತು ಭಾಷಾಂತರ, ಶೈಕ್ಷಣಿಕ ಮೇಲ್ವಿಚಾರಕರಿಗೆ ಶಾಲಾ ನಾಯಕತ್ವದ ಕುರಿತು ವೆಬಿನಾರ್/ಕಾರ್ಯಾಗಾರಗಳ ಆಯೋಜನೆ ಮುಂತಾದ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿದೆ.

❖ **ಸಂಸ್ಥೆಯ ಗುರಿ ಮತ್ತು ಉದ್ದೇಶಗಳು:**

ಶಿಕ್ಷಣದ ನಿರ್ವಹಣೆಯನ್ನು ಸರ್ಕಾರದ ನಿಯಂತ್ರಣದಿಂದ ನಿಧಾನವಾಗಿ ಮತ್ತು ಸ್ಥಿರವಾಗಿ ಸಮರ್ಥ ಸಮುದಾಯಕ್ಕೆ ವರ್ಗಾಯಿಸುವುದು ಸಿಸ್ಲೆಪ್ ಸಂಸ್ಥೆಯ ಪ್ರಮುಖ ಗುರಿಯಾಗಿದೆ. ಈ ಗುರಿಯ ಸಾಧನೆಗೆ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ಎಲ್ಲ ಭಾಗೀದಾರರ ದೃಷ್ಟಿಕೋನ ಮತ್ತು ಮನೋಭಾವದಲ್ಲಿ ಬದಲಾವಣೆ ಅತ್ಯಗತ್ಯ. ಇದಕ್ಕಾಗಿ ಶಾಲಾ ಹಂತದಿಂದ ರಾಜ್ಯ ಹಂತದವರೆಗಿನ ಮೇಲುಸ್ತುವಾರಿ ಅಧಿಕಾರಿಗಳಿಗೆ, ಸಮುದಾಯದ ನಾಯಕರುಗಳಿಗೆ ಸಾಮರ್ಥ್ಯಾಧಾರಿತ ತರಬೇತಿ ನೀಡುವುದು, NIEPA, NCSL, NCERT, DSERT ಮುಂತಾದ ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಸಂಸ್ಥೆಗಳೊಂದಿಗೆ ಸಮನ್ವಯ ಸಾಧಿಸುವುದು, ಶೈಕ್ಷಣಿಕ ವಿಷಯಗಳಿಗೆ ಸಂಬಂಧಿಸಿದಂತೆ ಉತ್ತಮ ಅಭ್ಯಾಸಗಳನ್ನು ದಾಖಲೀಕರಿಸುವುದು ಸಂಸ್ಥೆಯ ಜವಾಬ್ದಾರಿಗಳಾಗಿವೆ.

- **ಶಿಕ್ಷಣ ನೀತಿ:** ಸಂಶೋಧನೆಗಳ ಫಲಿತಾಂಶವನ್ನು ಆಧರಿಸಿ ಶಿಕ್ಷಣ ನೀತಿ ರೂಪಿಸಲು ಹಾಗೂ ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣೆ ಮಾಡಲು ರಾಜ್ಯ ಸರ್ಕಾರಕ್ಕೆ ಪರಿಣಿತರ ನೆರವು ನೀಡುವುದು.

- **ಸಾಂಸ್ಥಿಕ ವಿನ್ಯಾಸ ಮತ್ತು ಶೈಕ್ಷಣಿಕ ಪ್ರಕ್ರಿಯೆ:** ಈಗಿರುವ ಶೈಕ್ಷಣಿಕ ವ್ಯವಸ್ಥೆ ಮತ್ತು ಪ್ರಕ್ರಿಯೆಗಳನ್ನು ಅಧ್ಯಯನ ಮಾಡಿ, ಶಿಕ್ಷಣದ ಉದ್ದೇಶದ ಈಡೇರಿಕೆಗೆ ಇವುಗಳಲ್ಲಿ ಅಗತ್ಯ ಬದಲಾವಣೆಗಳನ್ನು ಸೂಚಿಸುವುದು.

**ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಪ್ರಕ್ರಿಯೆಗಳು:** ಶಾಲೆಯಿಂದ ರಾಜ್ಯ ಮಟ್ಟದವರೆಗೆ ಶಿಕ್ಷಣ ವ್ಯವಸ್ಥೆಯಲ್ಲಿರುವ ಎಲ್ಲಾ ಭಾಗೀದಾರರಿಗೂ ನಾಯಕತ್ವ, ನಿರ್ವಹಣೆ ಮತ್ತು ಆಡಳಿತಾತ್ಮಕ ವಿಷಯಗಳಲ್ಲಿ ಸಾಮರ್ಥ್ಯಾಭಿವೃದ್ಧಿ ಮಾಡುವುದು; ಎಸ್.ಡಿ.ಎಂ.ಸಿ. ಸದಸ್ಯರು, ಗ್ರಾಮ ಪಂಚಾಯತಿ ಸದಸ್ಯರು ಮತ್ತು ಸಮುದಾಯದ ಇತರರಿಗೆ ಯೋಜನೆ, ಸಹಭಾಗಿತ್ವ ಪ್ರಕ್ರಿಯೆ, ಶಾಲಾಭಿವೃದ್ಧಿ ಯೋಜನೆ ಮೊದಲಾದ ವಿಷಯಗಳಲ್ಲಿ ಸಾಮರ್ಥ್ಯಾಭಿವೃದ್ಧಿ ಮಾಡುವುದು; ಶೈಕ್ಷಣಿಕ ನಿರ್ವಾಹಕರಲ್ಲಿ ಸೇವಾ ಮನೋಭಾವ, ಉತ್ತಮ

ಆಡಳಿತ, ಪಾರದರ್ಶಕತೆ ಹಾಗೂ ಹೊಣೆಗಾರಿಕೆ ಮೂಡಿಸಲು ಸೂಕ್ತವಾದ ವಿಧಾನಗಳನ್ನು ಶಿಫಾರಸ್ಸು ಮಾಡುವುದು. ಶೈಕ್ಷಣಿಕ ಯೋಜನೆಗಳ ವೆಚ್ಚ ನಿಗದಿಪಡಿಸುವುದು, ಸಂಪನ್ಮೂಲ ಕ್ರೋಢೀಕರಣ ಮತ್ತು ಬಳಕೆಗೆ ಸಂಬಂಧಿಸಿದಂತೆ ಮಾರ್ಗದರ್ಶನ ಮಾಡುವುದು.

- **ಸಂಶೊಧನೆ ಮತ್ತು ಮೌಲ್ಯಮಾಪನ:** ಶೈಕ್ಷಣಿಕ ನಿರ್ವಹಣಾ ಕ್ಷೇತ್ರವು ನಿರಂತರ ಅಧ್ಯಯನ ಬಯಸುವುದರಿಂದ ಸಂಶೋಧನೆಯು ಸಿಸ್ಲೆಪ್‌ನ ಪ್ರಾಥಮಿಕ ಕಾರ್ಯಗಳಲ್ಲಿ ಒಂದು. ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ವಿಭಿನ್ನ ಕಾರ್ಯಕ್ರಮಗಳೂ ಸೇರಿದಂತೆ ಇಲಾಖೆಯ ಬೇರೆ ಬೇರೆ ಕ್ಷೇತ್ರಗಳನ್ನು ಕುರಿತು ಸಂಶೋಧನೆ ಕೈಗೊಳ್ಳುವುದು ಮತ್ತು ಮೌಲ್ಯಮಾಪನ ಮಾಡುವುದು ಸಿಸ್ಲೆಪ್‌ನ ಪ್ರಮುಖ ಉದ್ದೇಶವಾಗಿದೆ.

- **ಶಿಕ್ಷಣದ ಗುಣಮಟ್ಟ:** ಶಿಕ್ಷಣ ಇಲಾಖೆಯು ತನ್ನ ಎಲ್ಲ ಕಾರ್ಯಕ್ರಮಗಳ ಮೂಲಕ ಗುಣಾತ್ಮಕ ಶಿಕ್ಷಣ ಮತ್ತು ಗುಣಾತ್ಮಕ ಆಡಳಿತ ನೀಡಲು ಗಮನಹರಿಸಬೇಕು. ಗುಣಮಟ್ಟ ಸುಧಾರಣೆಗೆ ಅಗತ್ಯವಾದ ಸಂಶೋಧನೆಗಳು ಮತ್ತು ತರಬೇತಿಗಳನ್ನು ಸಿಸ್ಲೆಪ್ ಹಮ್ಮಿಕೊಳ್ಳುತ್ತದೆ. ಶೈಕ್ಷಣಿಕ ವರದಿಗಳನ್ನು ಆಧರಿಸಿ ಪ್ರಚಲಿತ ಶೈಕ್ಷಣಿಕ ಸೂಚ್ಯಯಾಂಕಗಳನ್ನು ವಿಶ್ಲೇಷಿಸುವ ಕೌಶಲ್ಯ ಹಾಗೂ ಸಾಮರ್ಥ್ಯವನ್ನು ಮೇಲ್ವಿಚಾರಕ ಅಧಿಕಾರಿಗಳಲ್ಲಿ ಅಭಿವೃದ್ಧಿಪಡಿಸುವುದು. ಗುಣಾತ್ಮಕ ಶಿಕ್ಷಣದ ಸಾಧನೆಗೆ ಕ್ಷೇತ್ರ ಮಟ್ಟದಲ್ಲಿ ಸೂಕ್ತ ಹೊಳಹುಗಳನ್ನು ಸೃಷ್ಟಿಸುವುದು ಈ ಸಂಸ್ಥೆಯ ಪ್ರಮುಖ ಕಾರ್ಯವಾಗಿದೆ.

❖ **ಧಾರವಾಡದಲ್ಲಿ ಸಂಸ್ಥೆಯ ಸ್ಥಾಪನೆಯ ಹಿನ್ನೆಲೆ:**

ಶೈಕ್ಷಣಿಕ ವಿಕೇಂದ್ರೀಕರಣದ ಆಶಯಕ್ಕೆ ಪೂರಕವಾಗಿ ಹಾಗೂ ರಾಜ್ಯ ಮಟ್ಟದ ಸಂಸ್ಥೆಯೊಂದು ರಾಜಧಾನಿ ಕೇಂದ್ರದಿಂದ ಹೊರಗಡೆ ಬೆಳೆದು ಬರುವುದರಿಂದ ರಾಜ್ಯದ ಎಲ್ಲ ಭಾಗಗಳ ಶೈಕ್ಷಣಿಕ ಭಾಗೀದಾರರ ಪಾಲ್ಗೊಳ್ಳುವಿಕೆ ಸಾಧ್ಯವಾಗುತ್ತದೆಯೆಂಬ ಆಶಯದಿಂದ 'ಸಿಸ್ಲೆಪ್' ಸಂಸ್ಥೆಯನ್ನು ಶೈಕ್ಷಣಿಕ ಕೇಂದ್ರವಾಗಿರುವ ಧಾರವಾಡದಲ್ಲಿ ಸ್ಥಾಪಿಸಲಾಗಿದೆ. ಇದಕ್ಕಾಗಿ ಧಾರವಾಡದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಆವರಣದಲ್ಲಿ ನಿರ್ಮಾಣವಾದ ಸಂಸ್ಥೆಯ ಸ್ವಂತ ಕಟ್ಟಡದಲ್ಲಿ ಸಂಸ್ಥೆಯು ಕಾರ್ಯ ನಿರ್ವಹಿಸುತ್ತಿದೆ.

**ಸಿಸ್ಲೆಪ್ ಸಂಸ್ಥೆಯ ಪ್ರಮುಖ ತರಬೇತಿ ಕಾರ್ಯಕ್ರಮಗಳು:**

ಶಾಲಾ ಮುಖ್ಯಸ್ಥರಲ್ಲಿ ನಾಯಕತ್ವದ ಗುಣಗಳನ್ನು ಅಭಿವೃದ್ಧಿ ಪಡಿಸಲು ಸಿಸ್ಲೆಪ್ ಸಂಸ್ಥೆಯಲ್ಲಿ ವಿವಿಧ ಸ್ತರದ ಮೇಲ್ವಿಚಾರಣಾ ಅಧಿಕಾರಿಗಳ ಬಲವರ್ಧನೆಗೆ ಪೂರಕವಾದ ತರಬೇತಿಗಳನ್ನು ಹಮ್ಮಿಕೊಳ್ಳಲು 2010–11 ರಿಂದ 2022–23 ರ ವರೆಗೆ ರಾಜ್ಯದ ಉಪನಿರ್ದೇಶಕರ ಕಛೇರಿಯ ವಿಷಯ ಪರಿವೀಕ್ಷಕರಿಗೆ, ಡಯಟ್ ಉಪನ್ಯಾಸಕರಿಗೆ ಹಾಗೂ ಬಿ.ಆರ್.ಪಿ, ಶಿಕ್ಷಣ ಸಂಯೋಜಕರು, ಸಿ.ಆರ್.ಪಿ. ಗಳಿಗಾಗಿ ಶೈಕ್ಷಣಿಕ ಹಾಗೂ ಸಾಮರ್ಥ್ಯಾಭಿವೃದ್ಧಿ ತರಬೇತಿಯನ್ನು ಆಯೋಜಿಸಲಾಗುತ್ತಿದೆ. ಸರಕಾರಿ ಪ್ರೌಢಶಾಲಾ ಮುಖ್ಯಶಿಕ್ಷಕರಿಗೆ, ಬಿ.ಆರ್.ಸಿ. ಸಮನ್ವಯಾಧಿಕಾರಿಗಳು ಹಾಗೂ ಇತರ 'ಬಿ' ವೃಂದದ ಅಧಿಕಾರಿಗಳಿಗೆ ಶೈಕ್ಷಣಿಕ ನಾಯಕತ್ವ ಅಭಿವೃದ್ಧಿ ತರಬೇತಿ, ಪ್ರಾಥಮಿಕ ಶಾಲಾ ಮುಖ್ಯಶಿಕ್ಷಕರಿಗೆ ಶಾಲಾ ನಾಯಕತ್ವ ಅಭಿವೃದ್ಧಿ ತರಬೇತಿ (ಎಸ್.ಎಲ್.ಡಿ.ಪಿ), ಸಹನಿರ್ದೇಶಕರು ಮತ್ತು ತತ್ಸಮಾನ ವೃಂದ ಹಾಗೂ ಉಪನಿರ್ದೇಶಕರು (ಆಡಳಿತ ಮತ್ತು ಅಭಿವೃದ್ಧಿ) ಹಾಗೂ ತತ್ಸಮಾನ ವೃಂದದ ಅಧಿಕಾರಿಗಳಿಗೆ ತರಬೇತಿ, 'ಅಧಿಕಾರದಿಂದ ಉತ್ತರದಾಯಿತ್ವದೆಡೆಗೆ ತರಬೇತಿ, ಕ್ಷೇತ್ರಶಿಕ್ಷಣಾಧಿಕಾರಿಗಳು ಹಾಗೂ ತತ್ಸಮಾನ ವೃಂದದ ಅಧಿಕಾರಿಗಳಿಗೆ ಹಾಗೂ ಉಪನಿರ್ದೇಶಕರ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯ ಬೋಧಕೇತರ ವೃಂದದ ವ್ಯವಸ್ಥಾಪಕರಿಗೆ ಆಡಳಿತಾತ್ಮಕ ಹಾಗೂ ಸಾಮರ್ಥ್ಯಾಭಿವೃದ್ಧಿ ತರಬೇತಿ' ಎಲ್ಲ ಮೇಲ್ವಿಚಾರಕ ಅಧಿಕಾರಿಗಳಿಗೆ ಮಕ್ಕಳ ಶಿಕ್ಷಣ ಹಕ್ಕು ಕಾಯಿದೆ– 2009ರ ಅಡಿಯಲ್ಲಿ ಗುಣಾತ್ಮಕ ಶಿಕ್ಷಣದ ಸೂಚ್ಯಾಂಕಗಳ ಬಗ್ಗೆ ಒತ್ತು ನೀಡಿ ಪರಿಣಾಮಕಾರಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಈ ತರಬೇತಿ ಕಾರ್ಯಕ್ರಮಗಳಿಗೆ ಅವಶ್ಯಕವಿರುವ ವಿಷಯಗಳಲ್ಲಿ ನುರಿತ ತಜ್ಞರಿಂದ ಹಾಗೂ ಕ್ಷೇತ್ರ ಮಟ್ಟದ ಪ್ರಯೋಗಶೀಲ ಪರಿಣಿತರಿಂದ ತರಬೇತಿ ವಿನ್ಯಾಸ (Training Modules) ಗಳನ್ನು ರಚಿಸಲಾಗಿದೆ.

ಪ್ರಸ್ತುತ ಸಾಲಿನಲ್ಲಿ 'ವಿದ್ಯಾರ್ಥಿಗಳೊಂದಿಗೆ ಆಪ್ತಸಮಾಲೋಚನೆ ಹಾಗೂ ಮಾನಸಿಕ ಆರೋಗ್ಯದ ಉಪಕ್ರಮಗಳು', 'ಕಲಿಕಾ ಬೋಧನಾ ಪ್ರಕ್ರಿಯೆಯಲ್ಲಿ ನಾವೀನ್ಯತಾ ಉಪಕ್ರಮಗಳು ಗುಣಾತ್ಮಕ ಶಿಕ್ಷಣದಲ್ಲಿ ಭಾಗೀದಾರರ ಪಾತ್ರ, ಮನೋವೈಜ್ಞಾನಿಕ, ವೈಚಾರಿಕ ದೃಷ್ಟಿಕೋನದ ಅಭಿವೃದ್ಧಿ' ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗಾಗಿ, 'ಬಹುತ್ವದ
ಭಾರತ ಮತ್ತು ವ್ಯಕ್ತಿಘನತೆ', 'ಗ್ರಂಥಾಲಯ ಬಳಕೆ ಮತ್ತು ನಿರ್ವಹಣೆ', 'ಮಕ್ಕಳ ಹಕ್ಕುಗಳ ಸಂರಕ್ಷಣೆ ಮತ್ತು ಪ್ರಚಲಿತ ಕಾನೂನುಗಳು', 'ಮಕ್ಕಳ ಸುರಕ್ಷತೆಯ ವಿನೂತನ ಮಾರ್ಗೋಪಾಯಗಳು', 'ಭಾಷಾವನ' (Language Garden) ಮತ್ತು ಭಾಷಾ ಕೌಶಲ್ಯಗಳ ಅಭಿವೃದ್ಧಿ, ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸುವಲ್ಲಿ ಶಾಲಾ ಮುಖ್ಯಸ್ಥರ ಪಾತ್ರ,
ವಿಶೇಷ ಅಗತ್ಯವುಳ್ಳ ಮಕ್ಕಳ ಶಿಕ್ಷಣ ಮತ್ತು ಸೌಲಭ್ಯಗಳ ನಿರ್ವಹಣೆ', ಶೈಕ್ಷಣಿಕ ಸಮೀಕ್ಷೆಗಳು ಮತ್ತು ದತ್ತಾಂಶಗಳ ವಿಶ್ಲೇಷಣೆ' 'ಶಾಲೆಯಿಂದ ಹೊರಗುಳಿದ ಹಾಗೂ ಶಾಲೆ ಬಿಟ್ಟ ಮಕ್ಕಳನ್ನು ಪುನಃ ಶಾಲೆಗೆ ಕರೆತರಲು ಅನುಸರಿಸಬಹುದಾದ ಮಾರ್ಗೋಪಾಯಗಳು', 'ಶಿಕ್ಷಣದಲ್ಲಿ ರಂಗಕಲೆ' ಈ ಕುರಿತಾದ ತರಬೇತಿ ವಿನ್ಯಾಸಗಳನ್ನು ಅವಶ್ಯಕತೆಗಳಿಗನುಸಾರವಾಗಿ ಹೊಸದಾಗಿ ರೂಪಿಸಲಾಗಿದೆ.
ಗುಣಾತ್ಮಕ ಶಿಕ್ಷಣದ ಸಾಧನೆಯ ಹಿನ್ನೆಲೆಯಲ್ಲಿ ಸಿಸ್ಲೆಪ್ ಸಂಸ್ಥೆಯಲ್ಲಿ ಶಿಕ್ಷಣ ಇಲಾಖೆಯ ವಿವಿಧ ಸ್ತರದ ಮೇಲ್ವಿಚಾರಣಾ ಅಧಿಕಾರಿಗಳಿಗೆ ಐದು ದಿನಗಳ **ಆಡಳಿತಾತ್ಮಕ ತರಬೇತಿ** ಹಾಗೂ ಮೂರು ದಿನಗಳ **ಶೈಕ್ಷಣಿಕ ಸಾಮರ್ಥ್ಯಾಭಿವೃದ್ಧಿ** ತರಬೇತಿಗಳನ್ನು ನಡೆಸಲಾಗುತ್ತಿದ್ದು, ಈ ತರಬೇತಿಗಳಲ್ಲಿ 'ಶಾಲಾ ನಾಯಕತ್ವದ ಹೊಸ ಸವಾಲುಗಳು ಮತ್ತು ವಿನೂತನ ಆಚರಣೆಗಳು', ಕಛೇರಿ ಕಾರ್ಯವಿಧಾನ, ಸಂವಹನ ಕೌಶಲ್ಯಗಳು, ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು–2021, ಕರ್ನಾಟಕ ನಾಗರೀಕ ಸೇವಾ ನಿಯಮಗಳು.–1957, ಮಾಹಿತಿ ಹಕ್ಕು ಅಧಿನಿಯಮ–2005, ಕೆ ಸಿ ಎಸ್ ಆರ್ ನಿಯಮಗಳು, ರಜಾ ನಿಯಮಗಳು / ಸೇವಾ ಪುಸ್ತಕ ನಿರ್ವಹಣೆ , ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆ, ಖಜಾನೆ–2, ಹಣಕಾಸು ನಿರ್ವಹಣೆ. ವಿವಿಧ ಬಿಲ್ಲುಗಳ ತಯಾರಿ, ಕೆ ಟಿ ಪಿ ಪಿ ಕಾಯ್ದೆ 1999/2000, ವಿಶೇಷ ಅವಶ್ಯಕತೆಯುಳ್ಳ ಮಕ್ಕಳ ಶಿಕ್ಷಣ ಸೌಲಭ್ಯಗಳು ಹಾಗೂ ಪ್ರಚಲಿತ ಕಾನೂನುಗಳು, ಎಸ್.ಎ.ಟಿ.ಎಸ್. (Student Achievement Tracking System) ಮುಂತಾದ ವಿಷಯಾಂಶಗಳ ಕುರಿತಾಗಿ ತರಬೇತಿಯನ್ನು ನೀಡಲಾಗುತ್ತಿದೆ.

ಪ್ರಸ್ತುತ ಸಿಸ್ಲೆಪ್ ಸಂಸ್ಥೆಯಲ್ಲಿ 8206 ಹಾಗೂ ಕ್ಯಾಸ್ಕೇಡ್ ವಿಧಾನದಲ್ಲಿ ಡಯಟ್ ಹಂತದಲ್ಲಿ 9500 ವಿವಿಧ ಸ್ತರದ ಅಧಿಕಾರಿಗಳಿಗೆ ತರಬೇತಿಯನ್ನು ನೀಡಲಾಗಿದೆ. ಅವಶ್ಯಕತೆಗಳಿಗನುಗುಣವಾಗಿ ಇನ್ನಷ್ಟು ತರಬೆತಿ ವಿನ್ಯಾಸಗಳನ್ನು ರಚಿಸಲು ಹಾಗೂ ತರಬೇತಿಗಳನ್ನು ಆಯೋಜಿಸುವಲ್ಲಿ ಸಂಸ್ಥೆಯು ನಿರಂತರ ಕ್ರಿಯಾಶೀಲವಾಗಿದೆ. ಆ ಮೂಲಕ ಕರ್ನಾಟಕ ರಾಜ್ಯದ ಶಾಲೆಗಳಲ್ಲಿ ದಾಖಲಾಗುವ ಅರ್ಹ ವಯೋಮಾನದ ಎಲ್ಲ ಮಕ್ಕಳಿಗೆ ಗುಣಾತ್ಮಕ ಶಿಕ್ಷಣವನ್ನು ಖಾತರಿಪಡಿಸಲು ಆಶಿಸಲಾಗಿದೆ. ಶಾಲಾ ಶಿಕ್ಷಣ ಇಲಾಖೆಯಲ್ಲಿ ಐವತ್ತು ಸಾವಿರ ಪ್ರಾಥಮಿಕ ಶಾಲೆಗಳು ಹಾಗೂ ಇಪ್ಪತ್ತೈದು ಸಾವಿರಕ್ಕಿಂದ ಹೆಚ್ಚು ಪ್ರೌಢಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು, ಈ ಸಂಸ್ಥೆಗಳ ಮುಖ್ಯಸ್ಥರುಗಳು ಅತ್ಯುತ್ತಮ ಮೇಲ್ವಿಚಾರಕ ಕೌಶಲಗಳನ್ನು ಹಾಗೂ ಉತ್ತಮ ನಾಯಕತ್ವ ಗುಣಗಳನ್ನು ಹೊಂದಿರಬೇಕಾಗುತ್ತದೆ. ಇಷ್ಟು ಬೃಹತ್ ಸಂಖ್ಯೆಯ ಮೇಲ್ವಿಚಾರಕ ಅಧಿಕಾರಿಗಳ ಸಾಮರ್ಥ್ಯಾಭಿವೃದ್ಧಿಯ ಸಂಕಲ್ಪದೊಂದಿಗೆ ಈ ಸಂಸ್ಥೆಯು ಕಾರ್ಯ ನಿರ್ವಹಿಸುತ್ತಿದೆ. ಈ ಭಾಗದಲ್ಲಿ ಒಂದು ಅತ್ಯುತ್ತಮ ಶಾಲಾ ನಾಯಕತ್ವ ಹಾಗೂ ನಿರ್ವಹಣಾ ಸಂಸ್ಥೆಯು ಅಭಿವೃದ್ಧಿ

ಹೊಂದುತ್ತಿರುವುದು ಒಂದು ಆಶಾದಾಯಕ ವಿಷಯವಾಗಿದೆ. ಆ ಮೂಲಕ ಗುಣಾತ್ಮಕ ಶಿಕ್ಷಣದ ಗುರಿ ಸಾಧನೆಗೈದು ಸಾಂವಿಧಾನಿಕ ಆಶಯಗಳನ್ನು ಇಡೇರಿಸುವ ಪ್ರಯತ್ನಕ್ಕೆ ಇಂಬು ದೊರೆತಿದೆ. ಪ್ರಸ್ತುತ ಈ ಸಂಸ್ಥೆಯಲ್ಲಿ ಯೋಜನೆ ಮತ್ತು ನೀತಿ ನಿರೂಪಣೆ ವಿಭಾಗ, ಶಾಲಾ ನಿರ್ವಹಣಾ ವಿಭಾಗ, ಶೈಕ್ಷಣಿಕ ಹಣಕಾಸು ವಿಭಾಗ, ಸಂಶೋಧನೆ, ಮೌಲ್ಯಾಂಕನ ಮತ್ತು ಶೈಕ್ಷಣಿಕ ನಾವೀನ್ಯತಾ ವಿಭಾಗ, ಶೈಕ್ಷಣಿಕ ದತ್ತಾಂಶ ಮತ್ತು ಮಾಹಿತಿ ನಿರ್ವಹಣಾ ವಿಭಾಗಗಳಿವೆ. ಶಾಲೆಗಳ ತರಗತಿ ಕೋಣೆಗಳಲ್ಲಿ ದೇಶದ ಭವಿಷ್ಯವು ನಿರ್ಮಾಣವಾಗುತ್ತದೆ ಎಂಬ ಆಶಯಕ್ಕೆ ಪೂರಕವಾಗಿ ಹಾಗೂ ದೇಶಕ್ಕೆ ಬೇಕಾದ ಅತ್ಯುತ್ತಮ ನಾಗರಿಕರನ್ನು ನಿರ್ಮಾಣ ಮಾಡುವ ಮಹತ್ಕಾರ್ಯದಲ್ಲಿ ರಾಜ್ಯದ ಎಲ್ಲ ಹಂತದ ಜನಪ್ರತಿನಿಧಿಗಳು, ಶಿಕ್ಷಣ ತಜ್ಞರು, ಸಾಹಿತಿಗಳು, ಶಿಕ್ಷಣ ಪ್ರೇಮಿಗಳು, ಮತ್ತು ಉದ್ಯಮಗಳ ನೇತಾರರು ಈ ಸಂಸ್ಥೆಯ ಪ್ರಯತ್ನಗಳಲ್ಲಿ ಪಾಲುದಾರಿಕೆ ವಹಿಸಿ ಸಹಕಾರ ನೀಡುತ್ತಾರೆಂದು ಆಶಿಸಲಾಗಿದೆ.

**"ಬಿಂಕಕ್ಕೆ ಡೊಳ್ಳಿವುದು ವಿದ್ಯೆಯೇ?,**
**ಅವಿದ್ಯೆ ತವಿಪುದಾವುದೋ ಅಹಂಕಾರಮಂ ಅದು ವಿದ್ಯೆ.**
**ಮಿಕ್ಕುದೆಲ್ಲಂ ಅವಿದ್ಯೆ"**
**-- ರಾಷ್ಟ್ರಕವಿ ಕುವೆಂಪು.**

# ಪರಿವಿಡಿ


| ಕ್ರ .ಸಂ | ಅಧ್ಯಾಯಗಳು | ಪುಟ ಸಂಖ್ಯೆ |
|---|---|---|
| 01 | ಪೀಠಿಕೆ | 1 |
| 02 | ಪರಿಕಲ್ಪನೆ | 2 |
| 03 | ಬಹುತ್ವ ಕುರಿತು ಸಂಕ್ಷಿಪ್ತ ಇತಿಹಾಸ | 3 |
| 04 | ಉದ್ದೇಶಗಳು ಮತ್ತು ವ್ಯಾಪ್ತಿ | 4 |
| 05 | ಅಧ್ಯಾಯ 1 | 5-12 |
| 06 | ಅಧ್ಯಾಯ 2 | 13-18 |
| 07 | ಅಧ್ಯಾಯ 3 | 19-21 |
| 08 | ಅಧ್ಯಾಯ 4 | 22-24 |
| 09 | ಅಧ್ಯಾಯ 5 | 25-29 |
| 10 | ಆಕಾರ ಗ್ರಂಥಗಳು | 30 |

# ಪೀಠಿಕೆ

ಭಾರತದ ಬಹುತ್ವ ಹಾಗೂ ವ್ಯಕ್ತಿಘನತೆಯ ಬಗ್ಗೆ ಶಾಲಾ ಹಂತದಲ್ಲಿ ಮಕ್ಕಳಿಗೆ ಅರಿವು ಮೂಡಿಸಬೇಕಾದದ್ದು ನಮ್ಮೆಲ್ಲರ ಕರ್ತವ್ಯವಾಗಿದೆ.ನಮ್ಮ ಶಾಲೆಗಳಿಗೆ ದಾಖಲಾಗುವ ಮಕ್ಕಳು ಕೂಡ ವಿಭಿನ್ನ ಧರ್ಮ, ಜಾತಿ, ಸಂಸ್ಕೃತಿ, ಆಚರಣೆಗಳನ್ನು ಹೊಂದಿರುವ ಕುಟುಂಬಗಳಿಂದ ಬಂದವರಾಗಿದ್ದು, ವಿವಿಧತೆಗೆ ಶಾಲೆಯು ಒಂದು ಉತ್ತಮವಾದ ಉದಾಹರಣೆಯಾಗಿದೆ. ಈ ಭಿನ್ನತೆಗಳನ್ನು ತಿಳಿದು ಅದನ್ನು ಗೌರವಿಸಿ ರಕ್ಷಿಸುವುದು ಪ್ರತಿಯೊಬ್ಬ ಶಿಕ್ಷಕರ ಕರ್ತವ್ಯವಷ್ಟೇ ಅಲ್ಲದೇ ಈ ಭಿನ್ನತೆಗಳ ಮಧ್ಯೆಯೂ ನಾವೆಲ್ಲರೂ ಒಂದೇ ಎಂಬ ಭಾವನೆಯನ್ನು ಅರ್ಥಾತ್ ಏಕತೆಯನ್ನು ಮೂಡಿಸಬೇಕಾದದ್ದು ಶಿಕ್ಷಕರ ಆದ್ಯ ಕರ್ತವ್ಯವಾಗಿದೆ. ತಮ್ಮ ಸಹಪಾಠಿಗಳನ್ನು ಅವರ ಧರ್ಮ ,ಜಾತಿ, ಆಚಾರ, ವಿಚಾರಗಳನ್ನು ಸಂಪ್ರದಾಯಗಳನ್ನು ಮೀರಿ ಗೌರವಿಸುವ, ಪ್ರೀತಿಸುವ ಗುಣಗಳನ್ನು ಮಕ್ಕಳಿರುವಾಗಲೇ ಬೆಳೆಸಬೇಕಾದದ್ದು ಶಿಕ್ಷಕರ ಕರ್ತವ್ಯ .ಶಿಕ್ಷಕರ ಈ ಕಾರ್ಯಕ್ಕೆ ಬೆಂಬಲವಾಗಿ ನಿಂತು ಸೂಕ್ತ ಮಾರ್ಗದರ್ಶನ ನೀಡಲು ಮತ್ತು ಸೂಕ್ತ ಚಟುವಟಿಕೆಗಳ ಆಯೋಜನೆಗೆ ನೆರವಾಗುವುದು ಎಲ್ಲಾ ಮೇಲುಸ್ತುವಾರಿ ಅಧಿಕಾರಿಗಳ ಆದ್ಯ ಕರ್ತವ್ಯವಾಗಿದೆ. ಈ ನಿಟ್ಟಿನಲ್ಲಿ ರಾಜ್ಯ ಶಾಲಾ ನಾಯಕತ್ವ ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ, ಕರ್ನಾಟಕ ಧಾರವಾಡ ವತಿಯಿಂದ ಭಾರತದ ಬಹುತ್ವ ಮತ್ತು ವ್ಯಕ್ತಿ ಘನತೆ ಕುರಿತು ಸೂಕ್ತವಾದ ಸಾಹಿತ್ಯವನ್ನು ರಚಿಸಲು ನಿರ್ದೇಶಸಿದ ಹಿನ್ನೆಲೆಯಲ್ಲಿ ಶಿಕ್ಷಣ ಕ್ಷೇತ್ರದ ಮೇಲುಸ್ತುವಾರಿ ಅಧಿಕಾರಿಗಳಿಗೆ ಸೂಕ್ತವಾದ ತರಬೇತಿ ಸಾಹಿತ್ಯವನ್ನು ಸಿದ್ಧಪಡಿಸುವ ಪ್ರಯತ್ನವನ್ನು ಈ ಮೂಲಕ ಮಾಡಲಾಗಿದೆ.

ಈ ನಿಟ್ಟಿನಲ್ಲಿ ಶಾಲೆಯಲ್ಲಿ ವ್ಯಾಸಂಗಕ್ಕಾಗಿ ದಾಖಲಾಗುವ ವಿದ್ಯಾರ್ಥಿಗಳಲ್ಲಿ ಆರಂಭದ ದಿನಗಳಿಂದಲೇ ಭಾರತದ ಬಹುತ್ವ ಹಾಗೂ ವ್ಯಕ್ತಿ ಘನತೆ ಕುರಿತ ಪರಿಕಲ್ಪನೆಗಳನ್ನು ಮೂಡಿಸಬೇಕಾಗಿದೆ. ಇದರ ಹಿನ್ನಲೆಯಲ್ಲಿ ಶಾಲಾ ಶೈಕ್ಷಣಿಕ ಮೇಲುಸ್ತುವಾರಿ ಅಧಿಕಾರಿಗಳಿಗೆ ಈ ಬಗ್ಗೆ ಅರಿವನ್ನು ಮೂಡಿಸಿ ಅವರ ಮೂಲಕ ಶಾಲೆಗಳಲ್ಲಿ ಈ ಕುರಿತು ಸೂಕ್ತ ಚಟುವಟಿಕೆಗಳನ್ನು ಆಯೋಜಿಸಲು ಸಹಕಾರಿ ಆಗುವಂತೆ ಈ ತರಬೇತಿ ಸಾಹಿತ್ಯವನ್ನು ರಚಿಸಲಾಗಿದೆ.

## ಪರಿಕಲ್ಪನೆ

ಭಾರತದ ಶ್ರೀಮಂತ ಇತಿಹಾಸವು ಧಾರ್ಮಿಕ ಬಹುತ್ವದ ನಿರಂತರ ಪರಿಕಲ್ಪನೆಗೆ ಸಾಕ್ಷಿಯಾಗಿದೆ. ವಿಭಿನ್ನ ಧಾರ್ಮಿಕ ನಂಬಿಕೆಗಳೊಂದಿಗೆ ವೈವಿಧ್ಯಮಯ ಸಮುದಾಯಗಳಿಂದ ನೆಲೆಸಿರುವ ಭಾರತದ ಬಹುತ್ವದ ಬಟ್ಟೆಯನ್ನು ಹಿಂದೂ ಧರ್ಮ ,ಬೌದ್ಧ ಧರ್ಮ , ಜೈನ ಧರ್ಮ , ಇಸ್ಲಾಂ ಧರ್ಮ, ಕ್ರಿಶ್ಚಿಯನ್ ಧರ್ಮ, ಸಿಖ್ ಧರ್ಮ ಮತ್ತು ವಿವಿಧ ಸ್ಥಳೀಯ ಬುಡಕಟ್ಟು ನಂಬಿಕೆಗಳ ಎಳೆಗಳಿಂದ ನೇಯಲಾಗಿದೆ.




ಭಾರತದಲ್ಲಿ, ನಾವು ವೈವಿಧ್ಯತೆಯಲ್ಲಿ ಬದುಕಲು ಕಲಿತಿದ್ದೇವೆ ಮತ್ತು ನಮ್ಮ ಭೌಗೋಳಿಕ ವೈಶಿಷ್ಟ್ಯಗಳು ಈ ಬಂಧವನ್ನು ಮತ್ತಷ್ಟು ಗಟ್ಟಿಗೊಳಿಸುತ್ತವೆ. ಪಂಜಾಬ್ ಪ್ರದೇಶವು ಭೂಮಿಯ ಮೇಲಿನ ಅತ್ಯಂತ ಪ್ರಬಲವಾದ ಕೃಷಿಭೂಮಿಗೆ ಹೆಸರುವಾಸಿಯಾಗಿದೆ.ಉತ್ತರ ಪರ್ವತಪ್ರದೇಶವು ವಿಭಿನ್ನ ಜನರು ಮತ್ತು ವಿವಿಧಭಾಷೆಗಳನ್ನು ಕಂಡಿದೆ.ರಾಜಸ್ಥಾನ ಮರುಭೂಮಿಯಲ್ಲಿ, ನಾವು ರಾಜಸ್ಥಾನಿ ಭಾಷೆ ಮತ್ತು ಸಂಸ್ಕೃತಿಯನ್ನು ಕಾಣುತ್ತೇವೆ, ಭಾರತದ ಜನರ ಸಂಸ್ಕೃತಿ ಮತ್ತು ಭಾಷೆಯಲ್ಲಿ ವಿಭಿನ್ನತೆಯಿದೆ. ಮತ್ತಷ್ಟು ದಕ್ಷಿಣದಲ್ಲಿ ತಮಿಳುನಾಡು, ತೆಲಂಗಾಣ, ಕೇರಳ ಮತ್ತು ಕರ್ನಾಟಕದ ಜನರು ಎಲ್ಲಾ ವಿಶಿಷ್ಟ ಭಾಷೆಗಳು ಮತ್ತು ಪಾಕಪದ್ಧತಿಗಳನ್ನು ಹೊಂದಿದ್ದಾರೆ.

ಬಹುತ್ವವು ಪ್ರಜಾಪ್ರಭುತ್ವದ ಮಾದರಿಯಾಗಿ ಕಾರ್ಯನಿರ್ವಹಿಸುತ್ತಿದೆ, ಅಲ್ಲಿ ವಿವಿಧ ಗುಂಪುಗಳು ತಮ್ಮ ಅಭಿಪ್ರಾಯಗಳು ಮತ್ತು ಆಲೋಚನೆಗಳನ್ನು ಧ್ವನಿಸಬಹುದು.ಇದನ್ನು ಸಾಂಸ್ಕೃತಿಕ, ರಾಜಕೀಯ ಅಥವಾ ತಾತ್ವಿಕ ವರ್ತನೆಯಾಗಿ ವ್ಯಕ್ತಪಡಿಸಬಹುದು.ಬಹುತ್ವವು ಸಾಮಾಜಿಕ ಪರಸ್ಪರ ಕ್ರಿಯೆಯ ಅಭಿವ್ಯಕ್ತಿಯನ್ನು ನೀಡುತ್ತದೆ.

ಪ್ರಪಂಚದಲ್ಲಿ ಅತಿ ಹೆಚ್ಚು ವೈವಿಧ್ಯತೆಯನ್ನು ಹೊಂದಿರುವ ಪ್ರಜಾಪ್ರಭುತ್ವ ರಾಷ್ಟ್ರ ನಮ್ಮದು.ನಮ್ಮ ರಾಷ್ಟ್ರದಲ್ಲಿ ೧೨೨ ಪ್ರಮುಖ ಭಾಷೆಗಳು ಮತ್ತು ೧೫೯೯ ಇತರೆ ಭಾಷೆಗಳು ಹಾಗೂ ಸುಮಾರು ೩೦೦೦ ಜಾತಿಗಳು ೨೫೦೦೦ ಉಪ ಜಾತಿಗಳು ಹೊಂದಿದ್ದು ಇವುಗಳಲ್ಲಿ ಆಹಾರ , ಉಡಿಗೆ ತೊಡಿಗೆ , ಸಾಂಸ್ಕೃತಿಕ ಆಚರಣೆ , ಧಾರ್ಮಿಕ ಆಚರಣೆಗಳು ,ಬುಡಕಟ್ಟು ಸಮುದಾಯ ಆಚರಣೆಗಳು , ಪಾಕಪದ್ದತಿಗಳು , ವಿಭನ್ನತೆಯಲ್ಲೂ ವೈವಿಧ್ಯತೆಯನ್ನು ಕಾಣುತ್ತಿದ್ದೇವೆ.

ಭಾರತದ ಬಹುತ್ವ ಮತ್ತು ವ್ಯಕ್ತಿಘನತೆ ಎಂಬ ಪರಿಕಲ್ಪನೆಯು ತುಂಬಾ ಮುಖ್ಯವಾದ ಅಂಶವಾಗಿದೆ. ಎಂದರೆ ನನ್ನದು ಎನ್ನುವ ಬದಲು ನಮ್ಮದು ಎನ್ನುವ ಮಾತು "ಇವನಾರವಾ ಇವನಾರವ ಎನ್ನದೆ ಇವ ನಮ್ಮವ ಇವನಮ್ಮವ" ಎನ್ನುವ ಮಾತಾಗಿದೆ.

ವ್ಯಕ್ತಿ ಗೌರವ ಅಥವಾ ಘನತೆ ಎಂದರೆ ಪ್ರತಿ ಒಬ್ಬ ವ್ಯಕ್ತಿಯ ಮಾತುಗಳನ್ನು ಮತ್ತು ಅವನ ಗುಣಗಳನ್ನು ಗೌರವಿಸಿ ಅವುಗಳಿಗೆ ಆದ್ಯತೆ ನೀಡುವುದು.

# ಬಹುತ್ವ ಕುರಿತು ಸಂಕ್ಷಿಪ್ತ ಇತಿಹಾಸ

ಭಾರತ ದೇಶವು ಕೇವಲ ಬೃಹತ್ ರಾಷ್ಟ್ರವಲ್ಲದೆ ಬಹುತ್ವ ಸಮಾಜವನ್ನೂ ಹೊಂದಿದೆ. ಅದರ ಏಕತೆ ಮತ್ತು ವೈವಿಧ್ಯತೆಯು ಅದನ್ನು ನಿರೂಪಿಸುತ್ತದೆ. ಹಲವಾರು ವಿದೇಶಿ ಆಕ್ರಮಣಗಳು ಮತ್ತು ಬ್ರಿಟಿಷ್ ಆಳ್ವಿಕೆಯ ಹೊರತಾಗಿಯೂ ರಾಷ್ಟ್ರದ ಏಕತೆ ಮತ್ತು ಸಮಗ್ರತೆಯನ್ನು ಕಾಪಾಡಲಾಗಿದೆ. ಈ ಸಂಶ್ಲೇಷಣೆಯೇ ಭಾರತವನ್ನು ಸಂಸ್ಕೃತಿಗಳ ವಿಶಿಷ್ಟ ರಾಷ್ಟ್ರವನ್ನಾಗಿ, ವಿವಿಧತೆಯಲ್ಲಿ ಏಕತೆಯನ್ನು ಹೊಂದಿದ ದೇಶವನ್ನಾಗಿಸಿದೆ. ಭಾರತವು ಬ್ರಿಟಿಷ್ ಆಳ್ವಿಕೆಯ ವಿರುದ್ಧ ಏಕೀಕೃತ ಘಟಕವಾಗಿ ಹೋರಾಡಿರುವುದು ನಮಗೆಲ್ಲರಿಗೂ ತಿಳಿದ ವಿಚಾರವೇ ಆಗಿದೆ. ವೈವಿಧ್ಯಮಯ ಭಾಷೆಗಳು, ಧರ್ಮಗಳು ಮತ್ತು ಸಂಸ್ಕೃತಿಗಳ ಅಸ್ತಿತ್ವ, ವಿದೇಶಿ ಪ್ರವಾಸಿಗರು ಮತ್ತು ಪ್ರಪಂಚದ ಇತರ ಭಾಗಗಳಿಂದ ವಲಸೆಯು ಭಾರತದ ಸಂಸ್ಕೃತಿಯನ್ನು ಸಹಿಷ್ಣುಗೊಳಿಸಿದೆ. ಭಾರತದಲ್ಲಿನ ವೈವಿಧ್ಯತೆಯ ಮೂಲಗಳನ್ನು ವಿವಿಧ ರೀತಿಯಲ್ಲಿ ಕಂಡುಹಿಡಿಯಬಹುದು.

ಸ್ವತಂತ್ರ್ಯೋತ್ತರ ಭಾರತವು ಹಲವಾರು ಅಡೆತಡೆಗಳ ವಿರುದ್ಧ ಹೋರಾಡಿ ಒಂದು ರಾಷ್ಟ್ರವಾಗಿ ನಿರ್ಮಾಣವಾಗಿದೆ. ಭಾರತದ ಏಕತೆಯ ಕಲ್ಪನೆಯು ಎಲ್ಲಾ ಐತಿಹಾಸಿಕ ಮತ್ತು ಸಾಮಾಜಿಕ- ಸಾಂಸ್ಕೃತಿಕ ಸಂಗತಿಗಳಲ್ಲಿ ಮತ್ತು ಸಾಂಸ್ಕೃತಿಕ ಪರಂಪರೆಯಲ್ಲಿ ಅಂತರ್ಗತವಾಗಿರುತ್ತದೆ. ಭಾರತವು ಜಾತ್ಯತೀತ ರಾಷ್ಟ್ರವಾಗಿದೆ ಮತ್ತು ಇದು ವಿವಿಧ ಪ್ರದೇಶಗಳು, ಧರ್ಮಗಳು, ಸಂಸ್ಕೃತಿಗಳು ಮತ್ತು ಭಾಷೆಗಳಿಗೆ ಸೇರಿದ ಜನರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಸಂವಿಧಾನವನ್ನು ಹೊಂದಿದೆ. ಇದು ಎಲ್ಲಾ ಸಾಮಾಜಿಕ ಆರ್ಥಿಕ ಸ್ತರಗಳಿಗೆ ಸೇರಿದ ಜನರನ್ನು ಒಳಗೊಳ್ಳುತ್ತದೆ. ಪಂಚವಾರ್ಷಿಕ ಯೋಜನೆಗಳ ಮೂಲಕ ಮತ್ತು ಇತರ ಹಲವಾರು ಅಭಿವೃದ್ಧಿ ಯೋಜನೆಗಳು ಸಮಾಜದ ಬಡ ಮತ್ತು ದುರ್ಬಲ ವರ್ಗದವರನ್ನು ಮೇಲೆತ್ತಲು ಪ್ರಯತ್ನಿಸಲಾಗುತ್ತಿದೆ.

ಸಾಮಾಜಿಕ,ಭಾಷಿಕ,ಸಾಂಸ್ಕೃತಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ವೈವಿಧ್ಯತೆಯ ಹೊರತಾಗಿಯೂ ಏಕತೆಯ ಎಳೆ ಇದೆ. ಭಾರತದಲ್ಲಿ ಹಿಂದೂ, ಬೌದ್ಧ, ಜೈನ, ಸಿಖ್, ಇಸ್ಲಾಂ ಮತ್ತು ಕ್ರೈಸ್ತ,ಪಾರ್ಷಿ ಮುಂತಾದ ವಿವಿಧ ಧರ್ಮಗಳ ಅನುಯಾಯಿಗಳಿದ್ದಾರೆ. ಎಲ್ಲಾ ಧರ್ಮಗಳು ತಮ್ಮ ಪಂಗಡಗಳನ್ನು ಮತ್ತು ಉಪವಿಭಾಗಗಳನ್ನು ಹೊಂದಿವೆ. ಆದ್ದರಿಂದ ಧಾರ್ಮಿಕ, ಜನಾಂಗೀಯ ಸಂಯೋಜನೆಗಳು ಮತ್ತು ಭಾಷಾ ವ್ಯತ್ಯಾಸಗಳಿಗೆ ಸಂಬಂಧಿಸಿದಂತೆ ಮಾತ್ರವಲ್ಲದೆ ಜೀವನ ಮಾದರಿಗಳು, ಔದ್ಯೋಗಿಕ ಅನ್ವೇಷಣೆಗಳು, ಭೂ ಹಿಡುವಳಿ ವ್ಯವಸ್ಥೆಗಳು, ಜೀವನಶೈಲಿಗಳು, ಉತ್ತರಾಧಿಕಾರ ಮತ್ತು ಉತ್ತರಾಧಿಕಾರ ಕಾನೂನಿನಲ್ಲಿ ವೈವಿಧ್ಯತೆ ಇದೆ. ಜನನ, ಮರಣ, ಮದುವೆ ಮತ್ತು ವಿವಿಧ ಕಾರ್ಯಗಳಿಗೆ ಸಂಬಂಧಿಸಿದ ಆಚರಣೆಗಳು ವಸ್ತ್ರವಿನ್ಯಾಸ ಮತ್ತು ವಿಧಿಗಳನ್ನು ಸಹ ಪ್ರತಿಯೊಂದು ಧರ್ಮವು ವಿಭಿನ್ನವಾಗಿ ನಿರ್ವಹಿಸುತ್ತದೆ.

" ದಿ ಡಿಸ್ಕವರಿ ಆಫ್ ಇಂಡಿಯಾ" ಪುಸ್ತಕದಲ್ಲಿ, ಜವಾಹರಲಾಲ್ ನೆಹರು ಅವರು ಭಾರತೀಯ ಏಕತೆಯು ಹೊರಗಿನಿಂದ ಹೇರಿದ ವಸ್ತುವಲ್ಲ, ಇದು ಆಳವಾದ ಮತ್ತು ಅದರ ಮಡಿಕೆಗಳೊಳಗೆ, ನಂಬಿಕೆ ಮತ್ತು ಸಂಪ್ರದಾಯದ ವಿಶಾಲವಾದ ಸಹಿಷ್ಣುತೆಯನ್ನುಹೊಂದಿದೆ ಎಂದು ಹೇಳಿದ್ದಾರೆ. ಭಾರತವನ್ನು ವರ್ಣಿಸಲು "ವಿವಿಧತೆಯಲ್ಲಿ ಏಕತೆ" ಎಂಬ ವಾಕ್ಯವನ್ನು ಸೃಷ್ಟಿಸಿದವರು ಪಂಡಿತ ಜವಾಹರಲಾಲ ನೆಹರೂರವರು.

## ಉದ್ದೇಶಗಳು

- ಬಹುತ್ವ ಭಾರತದ ಬಗ್ಗೆ ಅಧಿಕಾರಿಗಳಲ್ಲಿ, ಶಿಕ್ಷಕರಲ್ಲಿ ಮತ್ತು ವಿದ್ಯಾರ್ಥಿಗಳಲ್ಲಿ ಸಕಾರಾತ್ಮಕ ಭಾವನೆ ಮೂಡಿಸುವುದು

- ಶಾಲಾ ಹಂತದಲ್ಲಿ ವಿದ್ಯಾರ್ಥಿಗಳ ವೈವಿಧ್ಯತೆಗಳನ್ನು ಆಧರಿಸಿದ ಚಟುವಟಿಕಗಳನ್ನು ಹಮ್ಮಿಕೊಂಡು ಆ ವೈವಿಧ್ಯತೆಗಳನ್ನು ಗೌರವಿಸುವ ಮನಸ್ಥಿತಿಯನ್ನು ಮೇಲುಸ್ತುವಾರಿ ಅಧಿಕಾರಿಗಳನ್ನು ಒಳಗೊಂಡಂತೆ ಎಲ್ಲಾ ಭಾಗಿದಾರರಲ್ಲಿ ಉಂಟುಮಾಡಬಹುದು .

- ವೈವಿಧ್ಯತೆಗಳನ್ನು ಮೀರಿ ವ್ಯಕ್ತಿ ಘನತೆಯನ್ನು ಗೌರವಿಸುವ ವಾತಾವರಣವನ್ನು ಶಾಲೆಗಳಲ್ಲಿ ಸೃಷ್ಟಿ ಮಾಡುವುದು .

- ಶಿಕ್ಷಣ ಕ್ಷೇತ್ರದಲ್ಲಿ ವ್ಯಕ್ತಿಗಳ ಸಾಂಸ್ಕೃತಿಕ ಹಿನ್ನಲೆಯನ್ನು ಆಧರಿಸಿ ಯಾವುದೇ ತಾರತಮ್ಯ ಮಾಡದಂತೆ ಸ್ನೇಹಮಯ ವಾತಾವರಣವನ್ನು ಕಲ್ಪಿಸಿಕೊಡುವುದು.

- ಭಾರತದ ಸಂವಿಧಾನದ ತತ್ವಗಳು ಬಹುತ್ವ ಮತ್ತು ವ್ಯಕ್ತಿ ಘನತೆಯನ್ನು ಪೋಷಿಸುತ್ತಿರುವ ಅಂಶಗಳ ಬಗ್ಗೆ ಎಲ್ಲಾ ಭಾಗಿದಾರರಲ್ಲೂ ಅರಿವು ಮೂಡಿಸುವುದು .

## ತರಬೇತಿ ಸಾಹಿತ್ಯದ ವ್ಯಾಪ್ತಿ

ಈ ತರಬೇತಿ ಸಾಹಿತ್ಯವು ನಮ್ಮ ಶಾಲೆಗಳಲ್ಲಿ ಒಂದನೇ ತರಗತಿಗೆ ದಾಖಲಾಗುವ ವಿದ್ಯಾರ್ಥಿಗಳು, ಶಿಕ್ಷಕರು ವಿವಿಧ ಹಂತದ ಮೇಲುಸ್ತುವಾರಿ ಅಧಿಕಾರಿಗಳು ಹಾಗೂ ಇತರೆ ಭಾಗಿದಾರರಾದ ಪಾಲಕರು, ಎಸ್. ಡಿ .ಎಂ. ಸಿ ಸದಸ್ಯರು ಹಾಗೂ ಪದಾಧಿಕಾರಿಗಳು ಹಾಗೂ ಸ್ಥಳೀಯ ಸಮುದಾಯವನ್ನು ಪರಿಗಣಿಸಿ ತಯಾರಿಸಲಾಗಿದೆ. ಒಟ್ಟಾರೆಯಾಗಿ ಶಾಲಾ ಹಂತದಿಂದ ಜಿಲ್ಲಾ ಹಂತದವರೆಗೂ ಒಂದನೇ ತರಗತಿಯಿಂದ ಹನ್ನೆರಡನೆಯ ತರಗತಿವರೆಗೂ ಬರುವ ಎಲ್ಲಾ ವ್ಯಕ್ತಿಗಳಿಗೆ ಅನ್ವಯಿಸುತ್ತದೆ .

# ಅಧ್ಯಾಯ 1

## ಬಹುತ್ವ ಭಾರತದ ಬಗ್ಗೆ ಅಧಿಕಾರಿಗಳಲ್ಲಿ ಶಿಕ್ಷಕರಲ್ಲಿ ಮತ್ತು ವಿದ್ಯಾರ್ಥಿಗಳಲ್ಲಿ ಸಕರಾತ್ಮಕ ಭಾವನೆ ಮೂಡಿಸುವುದು.

ಭಾರತದಂತಹ ವಿಸ್ತಾರವಾದ ದೇಶದಲ್ಲಿ ಬಹುತ್ವದ ಅಂಶ ಇರುವುದರಿಂದ ಈ ದೇಶವು ಒಂದು ಅದ್ಭುತವಾದ ದೇಶ ಎನಿಸಿದೆ, ಏಕೆಂದರೆ ಇಲ್ಲಿ ವಿಭಿನ್ನವಾದಂತಹ ಆಚಾರ -ವಿಚಾರ, ಭಾಷೆ, ಧರ್ಮ, ಆಹಾರ ಪದ್ಧತಿ , ಉಡುಗೆ ತೊಡುಗೆ ,ವರ್ಣ ವ್ಯವಸ್ಥೆ, ಜಾತಿ ಪದ್ಧತಿ ಇದೆ. ಆದರೂ ನಾವೆಲ್ಲರೂ ಒಂದೇ ಎಂಬ ಭಾವನೆಯಿಂದ ಒಂದೇ ತಾಯಿ ಮಕ್ಕಳಂತೆ ಬದುಕನ್ನು ನಡೆಸುತ್ತಾ ಬಂದಿದ್ದೇವೆ. ಹಾಗಾಗಿ ನಮ್ಮ ದೇಶದಲ್ಲಿ ಬಹುತ್ವ ಭದ್ರವಾಗಿ ನೆಲೆಯೂರಿ ನಿಂತಿದೆ.

ಬಹುತ್ವದಲ್ಲಿ ಏಕತೆ ಮೂಡಿಸಬೇಕಾದ ಕ್ಷೇತ್ರಗಳು

**1. ಧರ್ಮದಲ್ಲಿ ಬಹುತ್ವತೆ.**

ಭಾರತದಲ್ಲಿ ಅನೇಕ ಧರ್ಮಗಳು ಅಸ್ತಿತ್ವದಲ್ಲಿದ್ದು ಈ ಧರ್ಮಗಳ ಜನರೆಲ್ಲಾ ತಮ್ಮ ತಮ್ಮ ಆಚರಣೆಗಳನ್ನು ಶ್ರದ್ಧಾಪೂರಕವಾಗಿ ಆಚರಿಸುತ್ತಿದ್ದು.ಇತರೆ ಧರ್ಮೀಯರ ಆಚರಣೆಗಳನ್ನು ಸಹಿತ ಗೌರವಿಸಲಾಗುತ್ತಿದೆ. ಭಾರತದಲ್ಲಿ ಕಂಡು ಬರುವ ಪ್ರಮುಖ ಧರ್ಮಗಳು ಕೆಳಕಂಡಂತೆ ಇವೆ.




| |
|---|
| **ಚಟುವಟಿಕೆ-1**<br>ಭಾರತದಲ್ಲಿ ಕಂಡು ಬರುವ ಪ್ರಮುಖ ಧರ್ಮ ಗ್ರಂಥಗಳನ್ನು ಪಟ್ಟಿ ಮಾಡಿ. |

**2. ಭಾಷೆಯಲ್ಲಿ ಬಹುತ್ವತೆ**

ಭಾರತದಲ್ಲಿ 122 ಪ್ರಮುಖ ಭಾಷೆ ಮತ್ತು 1599 ಇತರೆ ಭಾಷೆಗಳಿದ್ದು ಅವೆಲ್ಲವೂ ಆಗಾಧವಾದ ಭಾಷಾ ಶ್ರೀಮಂತಿಕೆಯನ್ನು ಹೊಂದಿವೆ. ಭಾರತ ಸಂವಿಧಾನದ 8ನೇ ಅನುಸೂಚಿಯು 22 ಅಧಿಕೃತ ಭಾಷೆಗಳ ಬಗ್ಗೆ ತಿಳಿಸುತ್ತದೆ.(2001 ರ ಜನಗಣತಿ ಪ್ರಕಾರ) ನಮ್ಮ ಭಾರತದಲ್ಲಿ ಚಲಾವಣೆಯಲ್ಲಿರುವ ಕರೆನ್ಸಿ ನೋಟುಗಳಲ್ಲಿ ಕಂಡುಬರುವ 15 ಭಾಷೆಗಳು ಇಂತಿವೆ.

1.ಅಸ್ಸಾಮಿ
2.ಬೆಂಗಾಲಿ
3.ಗುಜರಾತಿ
4.ಕನ್ನಡ
5.ಕಾಶ್ಮೀರಿ
6.ಕೊಂಕಣಿ
7.ಮಲಯಾಳಂ
8.ಮರಾಠಿ
9.ನೇಪಾಳಿ
10.ಒರಿಯಾ
11.ಪಂಜಾಬಿ
12.ಸಂಸ್ಕೃತ
13.ತಮಿಳು
14.ತೆಲುಗು
15.ಉರ್ದು.

**ಚಟುವಟಿಕೆ-2**
**ಭಾರತ ಸಂವಿಧಾನದ 8ನೇ ಅನುಸೂಚಿಸಿರುವ 22 ಅಧಿಕೃತ ಭಾಷೆಗಳನ್ನ ಪಟ್ಟಿ ಮಾಡಿ.**

**3. ಸಾಂಸ್ಕೃತಿಕ ಬಹುತ್ವತೆ.**

ಭಾರತವು ಸಾಂಸ್ಕೃಕವಾಗಿ ಶ್ರೀಮಂತಿಕೆಯ ನಾಡಾಗಿದೆ ಇಲ್ಲಿ ಅನೇಕ ಸಂಸ್ಕೃತಿಗಳು ಮೇಳೈಸಿವೆ ಇಲ್ಲಿರುವ ಆಚಾರ- ವಿಚಾರ ನಡೆ-ನುಡಿ ಉಡುಗೆ-ತೊಡುಗೆ ಆಹಾರ ಪದ್ಧತಿ ನೃತ್ಯ ಪ್ರಕಾರ ಎಲ್ಲವೂ ಭಿನ್ನವಾಗಿವೆ. ಆದರೂ ಸಹಿತ ನಾವೆಲ್ಲರೂ ಒಂದೇ ಎನ್ನುವಂತಹ ಸಮನ್ವಯತ ಭಾವನೆಯನ್ನು ಹೊಂದಿದ್ದೇವೆ.

ಭಾರತದ ವಿವಿಧ ರಾಜ್ಯಗಳಲ್ಲಿ ಕಂಡು ಬರುವ ಪ್ರಮುಖ ನೃತ್ಯ ಪ್ರಕಾರಗಳು

| ರಾಜ್ಯಗಳು | ನೃತ್ಯಗಳು |
|---|---|
| ಕರ್ನಾಟಕ | ಯಕ್ಷಗಾನ |
| ತಮಿಳುನಾಡು | ಭರತನಾಟ್ಯ |
| ಕೇರಳ | ಕಥಕಳಿ ಮತ್ತು ಮೋಹಿನಿ ಯಾಟಂ |
| ಆಂಧ್ರ ಪ್ರದೇಶ | ಕುಚುಪುಡಿ |
| ಕಾಶ್ಮೀರ | ರೂಫ್ |
| ಒಡಿಶಾ | ಒಡಿಸ್ಸಿ ,ಚೌ |
| ಮಣಿಪುರ | ಮಣಿಪುರಿ |
| ಅಸ್ಸಾಂ | ಸತ್ರಿಯಾ, ಬಿಹು |
| ಗುಜರಾತ್ | ಗರ್ಭಾ |
| ಉತ್ತರ ಪಶ್ಚಿಮ ಮತ್ತು ಮಧ್ಯಭಾರತ | ಕಥಕ್ |

**ಚಟುವಟಿಕೆ- 3**

**ಈ ಮೇಲಿನ ನೃತ್ಯ ಪ್ರಕಾರಗಳಲ್ಲಿ ತಾವು ನೋಡಿರುವ ನೃತ್ಯ ಪ್ರಕಾರಗಳನ್ನು ಹೆಸರಿಸಿ ತಮ್ಮ ಅನುಭವಗಳನ್ನು ಹಂಚಿಕೊಳ್ಳಿ.**

### 4. ವರ್ಗ ಕೋಣೆಯಲ್ಲಿ ಬಹುತ್ವತೆ.

**ಬಹುತ್ವ ಎಂಬುದು ವರ್ಗ ಕೋಣೆಯ ಉಗಮ ತಾಣ ಎಂದು ಹೇಳಬಹುದು, ಹೇಗೆಂದರೆ ಅಲ್ಲಿ ವಿವಿಧ ಲಿಂಗ, ಧರ್ಮ ,ಜಾತಿ ವರ್ಣದ ಮಕ್ಕಳು ತರಗತಿಯಲ್ಲಿ ನಾವೆಲ್ಲರೂ ಒಂದೇ ಎಂಬ ಮನೋಭಾವನೆಯಲ್ಲಿ ವಿದ್ಯಾರ್ಜನೆ ಮಾಡುತ್ತಾರೆ ಇಂತಹ ವಾತಾವರಣಕ್ಕೆ ಉತ್ತೇಜನ ನೀಡಲು ಶಾಲಾ ಶಿಕ್ಷಕರ ಪಾತ್ರ ಅತಿ ಮುಖ್ಯವಲ್ಲವೇ?**



**ಚಟುವಟಿಕೆ -4**

**ನಿಮ್ಮ ಬಾಲ್ಯದಲ್ಲಿ ಶಿಕ್ಷಣ ಕಲಿಯುವಾಗ ವರ್ಗ ಕೋಣೆಯಲ್ಲಿ ನಿಮ್ಮ ಸ್ನೇಹಿತರ ಜೊತೆ ಕಳೆದಿರುವ ಅಂದಿನ ಅನುಭವವನ್ನು ಸ್ಮರಿಸಿಕೊಂಡು ಪ್ರಸ್ತುತಪಡಿಸಿ [ಗುಂಪು ಚಟುವಟಿಕೆ]**

### 5. ಕಚೇರಿಗಳಲ್ಲಿ ಅಥವಾ ಕಾರ್ಯದಲ್ಲಿ ಬಹುತ್ವತೆ.

**ಭಾರತದ ಅಧಿಕಾರಿ ವರ್ಗಗಳಲ್ಲಿ ಬಹುತ್ವವನ್ನು ಕಾಣಬಹುದು ಹೇಗೆಂದರೆ ವಿವಿಧ ರೀತಿಯ ಸಾಮಾಜಿಕ ಕೆಲಸ ಕಾರ್ಯವನ್ನು ಮಾಡುವುದು ನಮ್ಮೆಲ್ಲರಿಗೂ ಗೊತ್ತಿರುವ ವಿಷಯವಾಗಿದೆ.ಪ್ರತಿಯೊಂದು ಕಛೇರಿಯಲ್ಲಿ ಬಹುತ್ವ ಆಶವನ್ನು ಇಟ್ಟುಕೊಂಡು ಪ್ರಗತಿದಾಯಕ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ .ಅಧಿಕಾರಿಗಳು ಶಾಲೆಗಳಿಗೆ ಭೇಟಿ ನೀಡಿದಾಗ ಶಿಕ್ಷಕರ ಜೊತೆ ಹಾಗೂ ಮಕ್ಕಳ ಜೊತೆಗೆ ಹಸನ್ಮುಖಿಯಾಗಿ ವರ್ತಿಸುವದರ ಮೂಲಕ ಬಹುತ್ವವನ್ನು ಸಮನ್ವಯಗೊಳಿಸಿದ್ದಾರೆ .ಅಧಿಕಾರಿಗಳು ಶಾಲೆಗೆ ಭೇಟಿ ನೀಡಿದಾಗ ಕೇವಲ ಭೌತಿಕ ಸೌಕರ್ಯಗಳನ್ನು ಪರಿಶೀಲನೆ ಮಾಡದೆ ಎಲ್ಲಾ ಬಗೆಯ ಜನಾಂಗ ,ಜಾತಿ, ವರ್ಣದ ವಿದ್ಯಾರ್ಥಿಗಳಿಂದ ಕೂಡಿದ ವರ್ಗ ಕೋಣೆಯಲ್ಲಿ ದೇಶದ ಆಸ್ತಿಯಾಗಿರುವಂತಹ ನಗುಮುಖದ ಮುಗ್ಧತೆಯನ್ನು ಹೊಂದಿರುವ ಹಾಗೂ ಭವಿಷ್ಯದ ಕುಡಿಗಳ ಜೊತೆ ಸ್ವಲ್ಪ ಸಮಯವನ್ನು ಕಳೆಯುವ ಮೂಲಕ ವಿದ್ಯಾರ್ಥಿಗಳ ಜೊತೆಗೆ ಸ್ನೇಹ ಸಂಬಂಧವನ್ನು ಬೆಳೆಸಿ ಅತ್ಯಂತ ಕಾಳಜಿ ಪೂರ್ವಕವಾಗಿ ಮಾರ್ಗದರ್ಶನ ಮಾಡಿ ಸಲಹೆಗಳನ್ನು ನೀಡುವುದರ ಮೂಲಕ ಅಧಿಕಾರಿಗಳು ಬಹುತ್ವದಿಂದ ಕಾರ್ಯವನ್ನು ನಿರ್ವಹಿಸುವುದು ತಿಳಿದಿದೆ . ಅದೇ ರೀತಿಯಾಗಿ ಪ್ರವಾಹ, ಬರಗಾಲ, ಗಲಭೆ ಇಂತಹ ಪ್ರದೇಶಗಳಿಗೆ ಅಧಿಕಾರಗಳು ಭೇಟಿ ನೀಡಿದಾಗ ಆ ಪ್ರದೇಶದಲ್ಲಿ ಬಹು ಜನಾಂಗದಿಂದ ಕೂಡಿರುವ ಸಾಮಾಜಿಕ ಜನಾಂಗವಿರುತ್ತದೆ .ಇಲ್ಲಿ ಭೇಟಿ ನೀಡಿರುವಂತಹ ಸಂದರ್ಭದಲ್ಲಿ ಒಂದೇ ಬಗೆಯ ಪರಿಹಾರ ವ್ಯವಸ್ಥೆಯನ್ನು ಮಾಡುವುದು ಕಂಡು ಬರುತ್ತದೆ .**

**ಚಟುವಟಿಕೆ -5**

**ಅಧಿಕಾರಿ ವೃಂದದವರೇ ನೀವು ಭೇಟಿ ನೀಡಿದ ಶಾಲೆ/ ಗ್ರಾಮ/ ಇಲಾಖೆಗಳ ಅನುಭವಹಂಚಿಕೊಳ್ಳಿ.**




**6. ಭೌಗೋಳಿಕ ಬಹುತ್ವತೆ.**

ನಮ್ಮ ದೇಶವು ಒಂದೇ ರೀತಿಯ ಭೌಗೋಳಿಕ ಸನ್ನಿವೇಶವನ್ನು ಹೊಂದಿರದೆ ವಿಭಿನ್ನತೆಯನ್ನು ಒಳಗೊಂಡಿದೆ ಕೆಲವೊಂದು ಭಾಗದಲ್ಲಿ ತೀರಾ ಬಿಸಿಲಿದ್ದರೆ ಇನ್ನೊಂದು ಕಡೆ ಅತಿಯಾದ ಚಳಿ, ಮತ್ತೆ ಕೆಲವಡೆ ಬಯಲು ಪ್ರದೇಶ ,ಹಿಮಾಲಯ ಪರ್ವತ ಮತ್ತು ಮರುಭೂಮಿ ಪ್ರದೇಶ ,ಕರಾವಳಿ ಪ್ರದೇಶ ಹೇಗೆ ತರಹೇವಾರಿ ಭೌಗೋಳಿಕ ಸನ್ನಿವೇಶವನ್ನು ಕಾಣುತ್ತೇವೆ. ನಮ್ಮ ದೇಶದ ಪ್ರಾದೇಶಿಕ ವಿಭಿನ್ನತೆಯನ್ನು ತೆರೆದ ಹೃದಯದಿಂದ ಒಪ್ಪಿಕೊಳ್ಳುವಂತೆ. ದೇಶದ ಪ್ರತಿಯೊಂದು ಬಹುತ್ವತೆಯನ್ನು ತೆರೆದ ಹೃದಯದಿಂದ ಸ್ವೀಕರಿಸೋಣ.

ಈ ದೃಷ್ಟಿಯಲ್ಲಿ ನಮ್ಮ ರಾಜ್ಯವು ಇಡೀ ದೇಶಕ್ಕೆ ಮಾದರಿಯಾಗಿದೆ. ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಇಲಾಖೆ ಘೋಷವಾಕ್ಯವಾದ **One State, Many Worlds** ಎನ್ನುವುದು ಒಂದೇ ರಾಜ್ಯದಲ್ಲಿ ಹಲವು ಜಗತ್ತುಗಳು ಎಂಬ ಅರ್ಥವನ್ನು ನೀಡಿದೆ. ಹಾಗೆಯೇ **One Nation Many Worlds** ಎನ್ನುವುದು ಒಂದು ದೇಶ ಹಲವು ಜಗತ್ತು ಎಂಬ ಪರಿಕಲ್ಪನೆಯನ್ನು ಜಗತ್ತಿಗೆ ತೋರಿಸಿದೆ.

**ಚಟುವಟಿಕೆ -6**

ಭಾರತದ ನಾಲ್ಕು ಪ್ರಾಕೃತಿಕ ವಿಭಾಗಗಳಲ್ಲಿ ನೀವು ಯಾವ ವಿಭಾಗಕ್ಕೆ ಭೇಟಿ ನೀಡಿರಿ ಎಂಬುದನ್ನ ಹಂಚಿಕೊಳ್ಳಿ.

GOVERNMENT OF KARNATAKA
Karnataka
One state. Many worlds.
Department of Tourism

**7. ಆಹಾರ ಪದ್ಧತಿಯಲ್ಲಿ ಬಹುತ್ವತೆ.**

ನಮ್ಮ ಭಾರತ ದೇಶದಲ್ಲಿ ಉತ್ತರ ಭಾರತದ ಆಹಾರ ಪದ್ಧತಿಗೂ, ದಕ್ಷಿಣ ಭಾರತದ ಆಹಾರ ಪದ್ದತಿಗೂ ಬಹಳ ಭಿನ್ನತೆ ಇದೆ . ಅದರಂತೆ ದಕ್ಷಿಣ ಭಾರತದಲ್ಲಿ ಸಹಿತ ರಾಜ್ಯದಿಂದ ರಾಜ್ಯಕ್ಕೆ ಭಿನ್ನತೆ ಇದೆ .ಅಷ್ಟೇ ಅಲ್ಲದೆ ನಮ್ಮ ಉತ್ತರ ಕರ್ನಾಟಕ ಆಹಾರ ಪದ್ಧತಿಗೂ ,ದಕ್ಷಿಣ ಕರ್ನಾಟಕದ ಆಹಾರ ಪದ್ಧತಿಗೂ, ಕರಾವಳಿ ಭಾಗದ ಆಹಾರ ಪದ್ಧತಿಗೂ ಬಹಳ ಭಿನ್ನತೆ ಇದೆ ಹಾಗಾಗಿ ನಾವೆಲ್ಲರೂ ಎಲ್ಲರ ಆಹಾರ ಪದ್ಧತಿಯನ್ನು ಗೌರವಿಸಿ ಆದರ್ಶತೆಯನ್ನು ಮೆರೆಯೋಣ.




**ಚಟುವಟಿಕೆ-7**

**1.ಉತ್ತರ ಕರ್ನಾಟಕದ ತರಕಾರಿಗಳು ಎಂದರೆ ಬೆಂಡೆಕಾಯಿ ,ಬದನೆಕಾಯಿ, ಸೌತೆಕಾಯಿ ಹೀಗೆ ಮುಂತಾದವು ಇವೆ. ಆದರೆ ಕರಾವಳಿ ಪ್ರದೇಶದಲ್ಲಿ ತರಕಾರಿ ಎಂದರೆ ಯಾವುದನ್ನ ಕರೆಯುತ್ತಾರೆ ಯೋಚಿಸಿ ನೋಡೋಣ?**

**2. ನೀವು ವಿವಿಧಪ್ರದೇಶಗಳಿಗೆ ಭೇಟಿ ನೀಡಿ ಅಲ್ಲಿಯ ಪ್ರಮುಖ ಆಹಾರವನ್ನು ಸ್ವೀಕರಿಸಿದ್ದೀರಿಅದರ ಅನುಭವವನ್ನು ಹಂಚಿಕೊಳ್ಳಿ.**

## 8. ಉದ್ಯೋಗದಲ್ಲಿ ಬಹುತ್ವತೆ

ದೇಶದಲ್ಲಿ ಅನೇಕ ರೀತಿಯ ಉದ್ಯೋಗಗಳನ್ನು ನಾವಿಂದು ಕಾಣುತ್ತಿದ್ದೇವೆ.ಪ್ರತಿಯೊಂದು ಉದ್ಯೋಗವು ತನ್ನದೇ ಆದ ವಿಶಿಷ್ಟ ತೆರನಾದ ಗೌರವವನ್ನು ಹೊಂದಿವೆ ಇಲ್ಲಿ ಯಾವುದೇ ಉದ್ಯೋಗ ಕೀಳಲ್ಲ ಯಾವುದೇ ಹುದ್ದೆವು ಮೇಲಲ್ಲ. ಭಾರತ ಸಂವಿಧಾನ ಜಾರಿಯಾದ ನಂತರ ಉದ್ಯೋಗದಲ್ಲಿ ಸ್ವತಂತ್ರತೆ ಹೆಚ್ಚಾಗಿ ಬೆಳೆಯಿತು.ಇಂದು ಉದ್ಯೋಗಗಳು ಯಾವುದೇ ಜಾತಿ ,ಮತ, ಪಂಥ, ಲಿಂಗಗಳಿಗೆ ಸೀಮಿತವಾಗಿಲ್ಲ .ಯಾವುದೇ ವ್ಯಕ್ತಿ ತನಗೆ ಇಷ್ಟವಾದ ಉದ್ಯೋಗವನ್ನು ಆರಿಸಿಕೊಳ್ಳುವ ಮುಕ್ತ ಸ್ವಾತಂತ್ರ್ಯತೆ ಹೊಂದಿರುತ್ತಾನೆ.

**ಚಟುವಟಿಕೆ -8**

**ಭಾರತ ಸಂವಿಧಾನದಲ್ಲಿ ಇರುವಂತೆ ಉದ್ಯೋಗದ ಹಕ್ಕುಮತ್ತು ಇದರ ಮಹತ್ವ ಭಾರತದ ಪರಿಕಲ್ಪನೆಗೆ ಹೇಗೆ ಸಹಕಾರಿಯಾಗಿದೆ? ಚರ್ಚಿಸಿರಿ.**

ಹೀಗೆ ಎಲ್ಲಾ ಕ್ಷೇತ್ರಗಳಲ್ಲಿಯೂ ಬಹುತ್ವತೆ ಕಂಡು ಬರುತ್ತದೆ ಇದೆಲ್ಲವನ್ನು ಒಳಗೊಂಡ ದೇಶ ನಮ್ಮ ಭಾರತ ವಾಗಿದೆ ಪ್ರತಿಯೊಂದು ವಿಭಿನ್ನತೆಯಲ್ಲಿ ಐಕ್ಯತೆಯನ್ನು ಸಾಧಿಸುವುದೇ ಬಹುತ್ವದಲ್ಲಿ ಏಕತೆಯಾಗಿದೆ.

## ಪ್ರಮುಖರು ಕಂಡಂತೆ ಬಹುತ್ವ ಭಾರತ

### ಮಹಾತ್ಮ ಗಾಂಧೀಜಿ

ಗಾಂಧೀಜಿ ಅವರು ತಮ್ಮ ದಿನತ್ಯದ ಪ್ರಾರ್ಥನೆಯಲ್ಲಿ ಸರ್ವಧರ್ಮ ಸಮಾನತೆಯ ಕುರುಹಾಗಿ ಎಲ್ಲ ಧರ್ಮ ಗ್ರಂಥಗಳ ಸ್ತೋತ್ರಗಳನ್ನು ಹೇಳಿಸುತ್ತಿದ್ದರು .ಗಾಂಧೀಜಿ ಮಾನವ ಜಗತ್ತನ್ನೇ ಒಂದು ಎಂದು ಭಾವಿಸಿ, ಅದರಂತೆ ಆಚರಿಸಿದರು .

### ರಾಮಕೃಷ್ಣ ಪರಮಹಂಸರು

"ನೀರಿಗೆ ಬೇರೆ ಬೇರೆ ಜನರು ಬೇರೆ ಬೇರೆ ಹೆಸರು ಹೇಳುತ್ತಾರೆ ಕೆಲವರು ಪಾನಿ,ಎನ್ನುತ್ತಾರೆ ಕೆಲವರು ಉದಕ ಎನ್ನುತ್ತಾರೆ ಒಂದೇ ರೀತಿ ದೇವರನ್ನು ಕೆಲವರು ಅಲ್ಲ ಎಂದು ಇನ್ನೂ ಕೆಲವರು ಕೃಷ್ಣ ಎಂದು ಮತ್ತೆ ಕೆಲವರು ಶಿವ ಎಂದು ಹೆಸರಿಟ್ಟು ಪೂಜಿಸುತ್ತಾರೆ ಆದರೆ ದೇವರು ಒಬ್ಬನೇ"

( ಧರ್ಮ ದೀಪ್ತಿ – ಕೆ ವಿ ಶ್ರೀನಿವಾಸ್ )

### ತ್ರಿಪದಿ ಕವಿ ಸರ್ವಜ್ಞ:

"ಜಾತಿ ಹೀನನ ಮನೆಯ ಜ್ಯೋತಿ ತಾ ಹೀನವೇ ಜಾತಿ ವಿಜಾತಿ ಎನಬೇಡ ದೇವನೊಲಿದಾತನೇ ಜಾತ ಸರ್ವಜ್ಞ "ಆ ಜಾತಿ ಈ ಜಾತಿ ಎಂದು ಎಣಿಸದೆ ಎಲ್ಲರನ್ನೂ ಸಮಾನವಾಗಿ ಕಾಣಬೇಕು.

### ಸ್ವಾಮಿ ವಿವೇಕಾನಂದರು

ಎಲ್ಲ ಜನರಲ್ಲಿರುವ ಆತ್ಮಗಳು ಒಂದೇ ; ಭಗವಂತನ ಅಂಶವನ್ನು ಎಲ್ಲ ಜನರಲ್ಲಿ ಕಾಣುತ್ತೇವೆ. ಆದ್ದರಿಂದ ಬಡ ಜನತೆಗೆ ನಿರ್ಗತಿಕರಿಗೆ ನಾನು ನಂಬಿರುವ ಏಕೈಕ ದೇವರಾದ ಬಡವರ ಸೇವೆಗಾಗಿ ಎಷ್ಟು ಜನ್ಮಗಳನ್ನಾದರೂ ತಾಳಲು ನಾನು ಸಿದ್ಧ.

( ಬದುಕಲು ಕಲಿಯಿರಿ – ಸ್ವಾಮಿ ಜಗದಾತ್ಮಾನಂದರು )

### ವಿಶ್ವಕವಿ ಕುವೆಂಪುರವರು

ನಾವೆಲ್ಲ ಜಾತಿ ಮತಗಳಿಗೆ ಅಂಟಿಕೊಂಡು ಸಣ್ಣವರಾಗಿದ್ದೇವೆ ಹಿಂದೂ -ಮುಸ್ಲಿಂ ಎಂಬುದು ನಾವು ಮಾಡಿಕೊಂಡ ಭೇದಗಳು, ಎಲ್ಲರೂ ಮನುಷ್ಯರಾಗಿ ಹುಟ್ಟುತ್ತಾರೆ. ಅವರಿಗೆ ಆ ಮೇಲೆ ಹಿಂದೂ- ಮುಸ್ಲಿಂ ಅಂಗಿಯನ್ನು ಹಾಕಿ ಬಿಡುತ್ತೇವೆ ನಾವೆಲ್ಲ ಮನುಷ್ಯರು ಎಂಬುದನ್ನು ಮರೆಯುತ್ತೇವೆ .( ಕುವೆಂಪು ವಿಚಾರಗಳು – ರೆಹಮತ್ ತರೀಕೆರೆ )

### ಬಹುತ್ವ ಭಾರತದಲ್ಲಿ ಭಾವೈಕ್ಯತೆ:

ನಾವು ನಂಬಿರುವಂತಹ ಧರ್ಮವನ್ನು ನಾವು ನಂಬಿರುವಂತಹ ಸಿದ್ಧಾಂತವನ್ನು ನಾವು ನಂಬಿಕೊಂಡು ಬಂದಿರುವಂತಹ ಆರಾಧನ ಪದ್ದತಿಯನ್ನು ಚೆನ್ನಾಗಿ ಅನುಷ್ಠಾನಕ್ಕೆ ತಂದಿರಬೇಕು ಹಾಗೆ ಇನ್ನೊಬ್ಬರು ನಂಬಿಕೊಂಡು ಬಂದಿರುವ ಧರ್ಮವನ್ನು ಇನ್ನೊಬ್ಬರು ನಂಬಿಕೊಂಡು ಬಂದಿರುವ ಸಿದ್ಧಾಂತವನ್ನು ಇನ್ನೊಬ್ಬರು ನಂಬಿಕೊಂಡು ಬಂದಿರುವ ಆರಾಧನಾ ಪದ್ಧತಿಯನ್ನು ಪ್ರಮಾಣಿಕವಾಗಿ ಗೌರವಿಸುವುದೇ ಭಾವೈಕ್ಯತೆ.



**ಚಟುವಟಿಕೆ-9**

ಭಾರತದ ಭಾವೈಕ್ಯತೆಗಾಗಿ ದುಡಿದಿರುವ ಪ್ರಮುಖ ಮಹಾತ್ಮರನ್ನು ಹೆಸರಿಸಿ ಅವರಂತೆ ಭಾರತದ ಭಾವೈಕ್ಯತೆಗಾಗಿ ನಾವು ಹೇಗೆ ಶ್ರಮಿಸಬಹುದು ?ಚರ್ಚಿಸಿರಿ.

## ಐಕ್ಯ ಗಾನ

ಎಲೈ ಕೋಗಿಲೆಯೇ
ನೀನೆದೆನು ಹಾಡುತ್ತಿರುವೆ
ಹಾಡುವೆಯಾದರೆ
ಹಾಡು ನೀ ಭಾರತದ
ಐಕ್ಯಗಾನವನು!,೧,!

ಎಲೈಪಾರಿವಾಳವೇ
ಕೊಂಡಯ್ಯುವಿಯಾದರೆ
ನೀ ಸಂದೇಶವನು
ಕೊಂಡುಯ್ಯುನೀನು
ಭಾರತದ ಖಂಡತೆಯ
ಸಂದೇಶವನು.೨

ಎಲೈ ದುಂಬಿಯೇ
ಝೇಂಕಾರವನ್ನು ಗೈದು
ಸಾರುವಿಯಾದರೆ
ಸಾರು ನೀ
ಭಾರತೀಯರೆಲ್ಲ
ಒಂದೆಂದು.೩

ಜಾಜಿ ಮಲ್ಲಿಗೆ
ಸಂಪಿಗೆ -ಸೇವಂತಿಗೆಯರೆ
ಬೀರುವುದಾದರೆ

ನೀವ್ ಕಂಪನು
ಬೀರಿರಿ ಭಾರತ ದೈಕ್ಯತೆಯ
ಕಂಪನು.೪

ಬಾನಿನಂಗಳದಲ್ಲಿ
ಗಸ್ತು ತಿರುಗುವ ಗರುಡನೇ
ನೀನದೇನು ನೋಡುತ್ತಿರುವೆ
ನೋಡುವಿಯಾದರೆ ನೋಡು ನೀ
ಭಾರತದ ಗಡಿಯನು
ಎಲ್ಲಿದೆಯೆಂದು ವೈರಿ ಪಡೆಯಲನು.೫
ಎಲೈ ಮನವೇ
ನಮಿಸುಯಾದರೆ
ನಮಿಸು ನೀ ಮೊದಲು
ಭಾರತ ಮಾತೆಗೆ
ನಂತರ ನಿನ್ನಿಷ್ಟ
ದೈವಕೆ- ಧರ್ಮಕ್ಕೆ. ( 'ಐಕ್ಯಗಾನ' ಕವನ ಸಂಕಲನ ಶ್ರೀ ಶಿವಲಿಂಗ ಕಾಂಬಳೆ )

## ವಿಶ್ವಮಾನವ ಪರಿಕಲ್ಪನೆ:

ಎಲ್ಲಾ ಮಕ್ಕಳು ಹುಟ್ಟುವಾಗ ವಿಶ್ವಮಾನವರೇ ಆಗಿರುತ್ತಾರೆ.ಅಂದರೆ ಅವಕ್ಕೆ ಜಾತಿ -ಮತ ಇರುವುದಿಲ್ಲ ಇದು ನನ್ನ ಕುಲ ಎಂಬ ಭಾವನೆ ಇರುವುದಿಲ್ಲ. ಅವು ಕೇವಲ ಮಕ್ಕಳಾಗಿರುತ್ತವೆ.ಲೋಕಕ್ಕೆ ಸೇರಿದ ಜೀವ ಆಗಿರುತ್ತವೆ.ಡೇರೆ ಬೀಳದ ಗಾಜಿನಂತೆ ಇರುತ್ತವೆ. ಆದರೆ ಆ ಮಗು ಬೆಳದಂತೆ ಅಲ್ಪ ಮಾನವ ಆಗುತ್ತದೆ .ತನ್ನ ಜಾತಿ ಇದು,ತನ್ನ ಧರ್ಮ ಇದು,ತನ್ನ ಕುಲ ಇದು ಎಂದು ಗೊತ್ತಾಗುತ್ತದೆ. ಇಲ್ಲಿ ಕುವೆಂಪುರವರು ತಿಳಿಸಿದಂತೆ ನಾವು ಭಾವನಾತ್ಮಕವಾಗಿ ವಿಶಾಲ ಮನೋಭಾವವನ್ನು ಬೆಳೆಸಿಕೊಳ್ಳಬೇಕು.

( ಆಧಾರ ಗ್ರಂಥ: ಕುವೆಂಪುರವರ ವಿಚಾರಗಳು – ರೆಹಮತ್ ತರೀಕೆರೆ )

**ಚಟುವಟಿಕೆ**
ತಾವು ಭೇಟಿ ನೀಡಿದ ಶಾಲೆಯಲ್ಲಿನ ಮಕ್ಕಳಲ್ಲಿ ವಿಶ್ವಮಾನವ ಪರಿಕಲ್ಪನೆಯನ್ನು ಹೇಗೆ ಮೂಡಿಸುತ್ತೀರಿ ?ಆಲೋಚಿಸಿರಿ.

ಜಾತಿ ಮತದ ಪಂಗಡಗಳ
ಬೇಲಿ ಕೀಳುವಾ
ಸರ್ವ ಸಮಾನತೆಯ ಬಳ್ಳಿ
ಸುತ್ತ ಬೆಳೆಸುವಾ.

ಹಿಂದಿನಿಂದ ಬಂದು ನಿಂತ
ಮೌಢ್ಯ ಅಳೆಯುವಾ
ಚಿನ್ನದಿಂದ ಬಂದಿಸಿರುವ
ಬೇಡಿ ಕಳಚುವಾ.

ನಾಡ ಏಳ್ಗೆಗಾಗಿ ನಾವು
ಕೂಡಿ ದುಡಿಯುವಾ
ಜಾತ್ಯತೀತ ರಾಷ್ಟ್ರವನ್ನು
ಬೇಗ ಕಟ್ಟುವಾ.

ದೇಶವನ್ನು ಒಡೆಯುವ ಸಂಚು
ನುಚ್ಚು ಮಾಡುವಾ
ದ್ರೋಹಿ ಜನಕ್ಕೆ ಉಗ್ರ ಶಿಕ್ಷೆ
ನಾವೇ ವಿಧಿಸುವಾ.

ಮನುಜ ಕುಲವು ಒಂದೇ ಎಂದು
ನಂಬಿ ನಡೆಯುವಾ
ಭರತ ಭೂಮಿಯಲ್ಲಿ ಪ್ರೇಮ
ದೀಪ ಬೆಳಗುವಾ.

# ಅಧ್ಯಾಯ 2

ಉದ್ದೇಶ : ಶಾಲಾ ಹಂತದಲ್ಲಿ ವಿದ್ಯಾರ್ಥಿಗಳ ವೈವಿಧ್ಯತೆಗಳನ್ನು ಆದರಿಸಿದೆ ಚಟುವಟಿಕೆಗಳನ್ನು ಹಮ್ಮಿಕೊಂಡು ಆ ವೈವಿಧ್ಯಗಳನ್ನು ಗೌರವಿಸುವ ಮನಸ್ಥಿತಿಯನ್ನು ಮೇಲುಸ್ತುವಾರಿ ಅಧಿಕಾರಿಗಳನ್ನು ಒಳಗೊಂಡಂತೆ ಎಲ್ಲ ಭಾಗಿದಾರರಲ್ಲಿ ಮೂಡಿಸುವುದು. ಶಾಲೆಯೇ ಒಂದು ದೇಶ. ಇಲ್ಲಿ ಅನೇಕ ಧರ್ಮದ ಜಾತಿಯ ಸಮುದಾಯದ ಮಕ್ಕಳು ಮತ್ತು ಶಿಕ್ಷಕರನ್ನ ಒಳಗೊಂಡಿರುತ್ತದೆ. ಈ ಒಟ್ಟುಗೂಡಿದ ಸಮೂಹವನ್ನು ಬಾಹ್ಯ ಅಂಶಗಳಿಂದ ಭಿನ್ನವೆಂದು ಕಂಡರೂ ಎಲ್ಲರಲ್ಲೂ ಇರುವ ಆತ್ಮ ಒಂದೇ ಎಂಬುದನ್ನು ಸರ್ವರು ನಮ್ಮವರು ಎಂಬ ಪರಿಕಲ್ಪನೆ ಮೂಡಿಸುವುದು ಶಿಕ್ಷಣದ ಮೂಲ ಉದ್ದೇಶಗಳಲ್ಲಿ ಒಂದಾಗಿದೆ.

ಇಲ್ಲಿ
ಯಾರೂ ಮುಖ್ಯರಲ್ಲ;
ಯಾರೂ ಅಮುಖ್ಯರಲ್ಲ;
ಯಾವುದೂ ಯಃಕಶ್ಚಿತವಲ್ಲ!

ಇಲ್ಲಿ
ಯಾವುದಕ್ಕೂ ಮೊದಲಿಲ್ಲ
ಯಾವುದೂ ತುದಿಯಿಲ್ಲ;
ಯಾವುದೂ ಎಲ್ಲಿಯೂ ನಿಲ್ಲುವುದು ಇಲ್ಲ;
ಕೊನೆಮುಟ್ಟುವುದೂ ಇಲ್ಲ!

ಇಲ್ಲಿ
ಅವಸರವೂ ಸಾವಧಾನದ ಬೆನ್ನೇರಿದೆ!
ಎಲ್ಲಕ್ಕೂ ಇದೆ ಅರ್ಥ;
ಯಾವುದೂ ಅಲ್ಲ ವ್ಯರ್ಥ;
ನೀರೆಲ್ಲವು ತೀರ್ಥ!
------ ಕುವೆಂಪು

ಕುವೆಂಪುರವರ ವಿಶ್ವವಾಣಿ ಸಂದೇಶ, ಆದಿ ಕವಿ ಪಂಪನ 'ಮಾನವ ಕುಲಂ ತಾನೊಂದೇ ವಲಂ' ಎಂಬ ವಾಣಿಯಂತೆ ಜಗತ್ತಿನಲ್ಲಿರುವ ಎಲ್ಲ ಮಾನವರು ಒಂದೇ ತಾಯಿಯ ಮಕ್ಕಳೆಂದು ಭ್ರಾತೃತ್ವದ ಭಾವನೆಯಲ್ಲಿ ಬೆಳೆಯಬೇಕೆಂದು ವಿವಿಧತೆಯ ಬಿಡಿಭಾಗಗಳನ್ನು ಜೋಡಿಸಿ ಏಕತೆ ಎಂಬ ಯಂತ್ರದ ಮೂಲಕ ದೇಶ ಕಟ್ಟುವ ಕೆಲಸ ಮಾಡಬೇಕಾಗಿದೆ ಈ ಕೆಲಸವು ಶಾಲಾ ಹಂತದಿಂದಲೇ ಪ್ರಾರಂಭಗೊಳ್ಳಬೇಕಾಗಿದೆ ವಿದ್ಯಾರ್ಥಿಗಳಿಗೆ ತಾವು ವ್ಯಕ್ತಿತ್ವದಿಂದ ಶ್ರೇಷ್ಠರು ಹಾಗೂ ಎಲ್ಲರಂತೆ ಸಮಾನರು ಎಂಬ ಕಲ್ಪನೆಯನ್ನು ಭದ್ರಗೊಳಿಸಬೇಕಾಗಿದೆ.

ಬೆಳೆಯುವ ಸಿರಿ ಮೊಳಕೆಯಲ್ಲಿ ಕಾಣು ಎಂಬುದರ ತಾತ್ಪರ್ಯ ಇದೇ ಆಗಿದೆ.ಭವ್ಯ ಭಾರತವನ್ನು ಬಹುತ್ವ ಭಾರತವಾಗಿಸಲು ವಿದ್ಯಾರ್ಥಿಗಳ ಮನಸ್ಸನ್ನು ಬಹುತ್ವದ ಕಲ್ಪನೆ ಆಧಾರದಲ್ಲಿ ಅರಳಿಸುವುದು ನಮ್ಮ ಕೆಲಸವಾಗಬೇಕಿದೆ.

ಬಹುತ್ವದ ವಿವಿಧ ರೂಪಗಳಲ್ಲಿ ಧರ್ಮ, ಭಾಷೆ, ಸಾಹಿತ್ಯ, ಆಹಾರ ಕಲೆ ಮತ್ತು ವಾಸ್ತುಶಿಲ್ಪ, ಲಿಂಗ ಪ್ರಾದೇಶಿಕತೆ ಮೊದಲಾದವುಗಳಾಗಿವೆ.

ಧರ್ಮ:-

ಭಾರತದಲ್ಲಿ ಪ್ರಮುಖವಾಗಿ ಹಿಂದೂ, ಮುಸ್ಲಿಂ, ಕ್ರೈಸ್ತ, ಜೈನ, ಬೌದ್ಧ, ಪಾರ್ಸಿ, ಲಿಂಗಾಯತ ಮತ್ತು ಸಿಖ್ ಧರ್ಮದವರನ್ನು ಒಳಗೊಂಡಂತೆ ಇನ್ನೂ ಅನೇಕ ಧರ್ಮಗಳು ಚಾಲ್ತಿಯಲ್ಲಿವೆ.

ಬಸವಣ್ಣನವರು- ದೇವನೊಬ್ಬ ನಾಮ ಹಲವು.
ಮಹಮ್ಮದ್ ಪೈಗಂಬರರು - ದೇವರು ಒಬ್ಬನೇ ಅವನೇ ಅಲ್ಲ.
ಯಹೂದ್ಯರ ಮೋಸಸ್ - ಯಾವೇ ದೇವರ ಹೊರತಾಗಿ ಬೇರೆ ದೇವರಿಲ್ಲ.

ಎಲ್ಲಾ ಧರ್ಮಗಳ ಸಂತರು ಹೇಳಿರುವ ಸಾರ ಒಂದೇ 'ದೇವರು ಒಬ್ಬನೇ' ಎಂಬುದಾಗಿದೆ. ಭಾರತದಲ್ಲಿ ಬಹುತ್ವವನ್ನು ಸಾರಲು ಶಾಲೆಯಲ್ಲಿ ಈ ಕೆಳಕಂಡ ಚಟುವಟಿಕೆಗಳನ್ನು ಆಯೋಜಿಸಬಹುದಾಗಿದೆ.

- ಶಾಲೆಯಲ್ಲಿ/ ಭಾಗಿದಾರರಲ್ಲಿ ಸರ್ವಧರ್ಮ ಪ್ರಾರ್ಥನೆಯನ್ನು ಹಾಡಿಸುವುದು
- https://youtu.be/_v6LNauLs5Y?si=UukdThaGYBgA9
- ಪ್ರಾಸಂಗಿಕವಾಗಿ ಆಚರಿಸುವ ಹಬ್ಬಗಳ ಅನುಭವಗಳನ್ನು ಹಂಚಿಕೊಳ್ಳಲು ಅನುಕೂಲಿಸುವುದು.
- ಧಾರ್ಮಿಕ ವಿಶೇಷ ಸ್ಥಳಗಳಿಗೆ ಭೇಟಿ ನೀಡಿ ಆಚರಣೆಯನ್ನ ಕುರಿತು ವಿಷಯ ಸಂಗ್ರಹಿಸಿ ಮಂಡನೆಗೆ ಅವಕಾಶವನ್ನು ಕಲ್ಪಿಸುವುದು.
- ವಿವಿಧ ಧರ್ಮದ ಧಾರ್ಮಿಕ ಆಚರಣೆಗಳನ್ನು ಚರ್ಚಿಸುವುದು ಮತ್ತು ಆ ಆಚರಣೆಯಲ್ಲಿ ಭಾಗವಹಿಸುವಂತೆ ಪ್ರೇರೇಪಿಸುವುದು.
- ಶಾಲೆಗಳಲ್ಲಿ ವೇಷ ಭೂಷಣ ಸ್ಪರ್ಧೆಯನ್ನು ಏರ್ಪಡಿಸುವುದು.
- ಸರ್ವಧರ್ಮದ ಭಾವೈಕ್ಯತೆಯ ಕಥೆಗಳನ್ನು ಹೇಳುವುದು.
- ನಮ್ಮ ದೇಶವನ್ನು ಆಳಿದ ವಿವಿಧ ರಾಜಮನೆತನಗಳು ಮತ್ತು ಸಂಹಿಷ್ಣುತಾ ಭಾವನೆಯನ್ನು ಬೆಳೆಸಿದ ರಾಜರ ಬಗ್ಗೆ ತಿಳಿಸುವುದು.

ಉದಾಹರಣೆ

ವಿಜಯನಗರ ಸಾಮ್ರಾಜ್ಯದ ಬುಕ್ಕರಾಯನು ಜೈನರು ಮತ್ತು ಶ್ರೀ ವೈಷ್ಣವರ ನಡುವಿನ ಧಾರ್ಮಿಕ ಕಲಹವನ್ನು ಬಗೆಹರಿಸಿ ಸರ್ವಮತ ಸಮನ್ವಯತೆಯ ನೀತಿಯನ್ನು ಎತ್ತಿ ಹಿಡಿದನು ಎಂಬುದನ್ನು ಶ್ರವಣಬೆಳಗೊಳದ ಶಾಸನವು ತಿಳಿಸುತ್ತದೆ
( ಉಲ್ಲೇಖ - 9 ನೇ ತರಗತಿ ಸಮಾಜ ವಿಜ್ಞಾನ ಪುಸ್ತಕ )



2. ಪ್ರೌಢದೇವರಾಯನು ತನ್ನ ಸಾಮ್ರಾಜ್ಯದಲ್ಲಿ ಮಸೀದಿಯನ್ನು ನಿರ್ಮಾಣ ಮಾಡಿದನು.

- ಪದ್ಮಶ್ರೀ ಶ್ರೀ ಇಬ್ರಾಹಿಂ ಸುತಾರ ಅವರ 'ಭಾವೈಕ್ಯತೆ ಎಂದರೇನು?' ಎಂಬುದರ ಪ್ರವಚನವನ್ನು ಆಲಿಸಲು ತಿಳಿಸುವುದು.
- https://youtu.be/EYiRJ_-zi7w?si=N60foU1GltFvCK0ಕ್ಷ ( ಪ್ರವಚನದ ಸಾರವನ್ನು ಚರ್ಚಿಸಿರಿ )

- ಸಹ ಪಂಕ್ತಿ ಭೋಜನ ಕಾರ್ಯಕ್ರಮವನ್ನು ಏರ್ಪಡಿಸುವುದು.
- https://youtu.be/4l7qCeD5PoA?si=z7_PzIQvlC8V-djO
- ಈ ಕಿರು ನಾಟಕವನ್ನು ಅಧಿಕಾರಿ ಮತ್ತು ಶಾಲಾ ಹಂತದಲ್ಲಿ ಮಾಡಿಸಬಹುದಾಗಿದೆ. ಈ ನಾಟಕವನ್ನು ತೋರಿಸಿ ಕೆಳಕಂಡ ಪ್ರಶ್ನೆಗಳನ್ನು ಕೇಳಬಹುದಾಗಿದೆ.
    1. ಈ ಕಿರು ನಾಟಕದ ಪ್ರಮುಖ ಸಂದೇಶವೇನು?
    2. ಇಂತಹ ಸಂದೇಶವಿರುವ ಯಾವುದಾದರೂ ನಾಟಕಗಳನ್ನ ಮಾಡಿಸಬಹುದಾಗಿದೆಯೇ? ಹಾಗಾದರೆ ಅವುಗಳನ್ನು ಹೆಸರಿಸಿ.
- ಎಲ್ಲಾ ರಾಷ್ಟ್ರ ನಾಯಕರ ದಿನಾಚರಣೆಗಳನ್ನು ಆಚರಿಸುವುದು.

ಒಟ್ಟಾರೆಯಾಗಿ ಶಾಲೆಯು ಒಂದು ಪುಟ್ಟ ಸಮಾಜ ವಾಗಿದ್ದು ದೇಶದ ವಿವಿಧ ಕಡೆ ಎಲ್ಲಾ ಧಾರ್ಮಿಕ ಆಚರಣೆಗಳನ್ನು ಎಲ್ಲರೂ ಸೇರಿ ಆಚರಿಸುವುದನ್ನು ಕಾಣಬಹುದಾಗಿದೆ. ಉದಾಹರಣೆಗೆ ಹಾವೇರಿ ಜಿಲ್ಲೆಯ ಶಿಗ್ಗಾಂವ ತಾಲೂಕಿನ ಚಿಕ್ಕಮಲ್ಲೂರಿನಲ್ಲಿ ಹಿಂದೂಗಳೇ ಮೊಹರಂ ಹಬ್ಬವನ್ನು ಆಚರಿಸುತ್ತಾರೆ.



## ಭಾವೈಕ್ಯತೆಯ ಕಂಪು ಹರಡುತ್ತಿರುವ ಬಳೂತಿ

**ಕೊಲ್ಹಾರ:** ತಾಲ್ಲೂಕಿನ ಬಳೂತಿ ಗ್ರಾಮದ ಆರಾಧ್ಯ ದೈವ ಬಿಬಿ ಫಾತೀಮಾ ದೇವತೆಯ ಹತ್ತು ದಿನದ ಜಿಯಾರತ್ ಕಾರ್ಯಕ್ರಮ ಶುಕ್ರವಾರ ಹಿಂದು ಮುಸ್ಲಿಂ ಬಾಂಧವರು ಭಾವೈಕ್ಯತೆಯಿಂದ ಅತ್ಯಂತ ವಿಜೃಂಭಣೆಯಿಂದ ಆಚರಿಸಿದರು. ಪ್ರತಿವರ್ಷ ಮೋಹರಂ ಮುಗಿದ ಹತ್ತನೆ ದಿನದಂದು ಜರುಗುವ ಬಳೂತಿ ಬಿಬಿ ಫಾತೀಮಾ ಜಿಯಾರತ್ ವಿಜಯಪುರ, ಬಾಗಲಕೋಟೆ ಅವಳಿ ಜಿಲ್ಲೆಯಲ್ಲಿ ಅತ್ಯಂತ ಪ್ರಸಿದ್ಧವಾಗಿದೆ. ಬೇಡಿದ ವರವನು ಕೊಡುವ ದೇವತೆ: ಭಕ್ತರನ್ನು ಉದ್ಧರಿಸುವ, ಬೇಡಿದ ವರವನು ಕರುಣಿಸುವ ದೇವತೆ ಎಂದು ಪ್ರಸಿದ್ಧಿ ಪಡೆದಿರುವ ಬಳೂತಿ ಬಿಬಿ ಫಾತಿಮಾ ದೇವತೆಗೆ ಪ್ರತಿವರ್ಷ ನೂರಾರು ಜನರು ಹರಕೆ ಕಟ್ಟಿಕೊಳ್ಳುತ್ತಾರೆ. ಪ್ರತಿವರ್ಷ ಮೋಹರಂ ಹಬ್ಬ ಮುಗಿದ ಹತ್ತನೆ ದಿನದಂದು ಆಚರಿಸಲ್ಪಡುವ ಬಿಬಿ ಫಾತಿಮಾ ದೇವತೆ ಜಿಯಾರತ್ ಶ್ರದ್ಧಾ ಭಕ್ತಿಯಿಂದ ಆಚರಿಸಲಾಗುತ್ತದೆ. ಅವಳಿ ಜಿಲ್ಲೆಯಿಂದ ಆಗಮಿಸುವ ಭಕ್ತಾದಿಗಳು ದೇವತೆಗೆ ಹರಕೆ ಕಟ್ಟಿಕೊಳ್ಳುತ್ತಾರೆ, ಹರಕೆ ಈಡೇರಿದ ಭಕ್ತಾದಿಗಳು ತಮ್ಮ ಹರಕೆಯನ್ನು ಪೂರೈಸುತ್ತಾರೆ. ಬಳೂತಿ ಭಾವೈಕ್ಯತೆ ಕಾಶಿ: ಬಳೂತಿ ಗ್ರಾಮವನ್ನು ಭಾವೈಕ್ಯತೆಯ ಕಾಶಿ ಎಂದೇ ಕರೆಯಬಹುದು. ಗ್ರಾಮದಲ್ಲಿ ಹಿಂದೂ ಮುಸ್ಲಿಂರು ಭಾವೈಕ್ಯತೆಯಿಂದ ಪ್ರತಿವರ್ಷ ಈ ಜಿಯಾರತ್ ಕಾರ್ಯಕ್ರಮವನ್ನು ಆಚರಣೆ ಮಾಡುತ್ತಾರೆ. ಹಿಂದೂ ಹಾಗೂ ಮುಸ್ಲಿಂ ಸಮುದಾಯದ ಹಿರಿಯರ ನೇತೃತ್ವದಲ್ಲಿ ಜರುಗುವ ಈ ಕಾರ್ಯಕ್ರಮ ಹಾಗೂ ಬಳೂತಿ ಗ್ರಾಮ ಭಾವೈಕ್ಯತೆಗೆ ಸಾಕ್ಷಿಯಾಗಿದೆ.

ಮೇಲಿನ ಸುದ್ದಿಯು ದಿನಾಂಕ : **28-07-2024** ರಂದು ವಿಶ್ವವಾಣಿ ದಿನ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಇಂತಹ ಘಟನೆಗಳನ್ನು ತಿಳಿಸಿ ವಿದ್ಯಾರ್ಥಿಗಳಲ್ಲಿ ಧರ್ಮದ ಬಹುತ್ವದ ಕಲ್ಪನೆಯನ್ನು ಮೂಡಿಸಬಹುದಾಗಿದೆ.

ಉಡುಗೆ - ತೊಡುಗೆ.

ಪ್ರದೇಶದಿಂದ ಪ್ರದೇಶಕ್ಕೆ ಉಡುಗೆ ತೊಡುಗೆಗಳು ಭಿನ್ನತೆಯನ್ನು ಹೊಂದಿದೆ. ಇಂತಹ ಭಿನ್ನತೆಯನ್ನು ಹೊಂದಿರುವ ದೇಶದಲ್ಲಿ ಬಹುತ್ವದ ಕಲ್ಪನೆಯನ್ನು ಉಡುಗೆ ತೊಡುಗೆಗಳ ಮೂಲಕ ಮೂಡಿಸಬಹುದಾಗಿದೆ.

ವೇಷ ಬೇರೆ ಭಾಷೆ ಬೇರೆ ದೇಶ ಒಂದೇ ಭಾರತ
ಒಂದೇ ತಾಯ ಮಕ್ಕಳೆಂದು ಘೋಷಿಸೋಣ ಸತತ.

ತೀರ್ಥ ನಗೆಯ ಕ್ಷೇತ್ರವಿದೋ ಭವ್ಯ ನಾಡು ಭಾರತ

ಋಷಿಗಳುಸಿರ ಹರಕೆ ಹೊತ್ತ ದಿವ್ಯ ನಾಡು ಭಾರತ
ಕಡಲುಗಳನೆ ಉಡುಗೆಯುಟ್ಟು
ಘಟ್ಟದೊಳು ಬಳೆಯ ತೊಟ್ಟು
ನದಿ ನದಗಳ ಹಾರವಿಟ್ಟು
ಸೇತುವಿಂದ ಸಿಂಧುವರೆಗೂ ಬೆಳೆದು ನಿಂತ ಭಾರತ
ಭಂಗಗೊಳದ ವಂಗ ನಾಡ ಕೂಡಿ ಮೆರೆದ ಭಾರತ
ಇದೇ ನಮ್ಮ ಭಾರತ ಪುಣ್ಯ ಭೂಮಿ ಭಾರತ.

ಭರತ ಖಂಡದಿಂದಲೇನೆ ನಿನಗೆ ಮೋಕ್ಷ ಪ್ರಾಪ್ತಿ
ತಪ್ಪಿ ನುಡಿದೆ ಎಂದರಹುದು ನಿನಗೆ ತಕ್ಕ ಶಾಸ್ತಿ
ಯಾವ ದೇಶದಲ್ಲೇ ದುಡಿ ಯಾವ ಮಣ್ಣಿನಲ್ಲೇ ಮಡಿ
ನಿಂತ ನೆಲವು ಹಿಡಿದ ಹುಡಿ ಭರತ ಭೂಮಿ ಎಂದು ತಿಳಿ.

ಮಣ್ಣ ಮೋಹ ಬಿಟ್ಟರಿಲ್ಲೋ ನಿನಗೆ ಬೇರೆ ಸದ್ಗತಿ
ಬರಿಯ ಮಾತಿನಲ್ಲೇ ಮುಗಿವುದಲ್ಲೋ ನಿನ್ನ ಸಂಸ್ಕೃತಿ
ಮಾನವತೆಯ ಶುಚಿ ಮತಿ ಸನಾತನದ ಸತ್ಕೃತಿ

(ಸಾ ಶಿ ಮರುಳಯ್ಯ)

**ಈ** ಮೇಲಿನಪದ್ಯದ ಸಾರಾಂಶವನ್ನು ಚರ್ಚಿಸಿರಿ

**ಚಟುವಟಿಕೆಗಳು:- 1 ರಾಷ್ಟ್ರ ನಾಯಕರ ವೇಷ ಭೂಷಣ ಸ್ಪರ್ಧೆ ಏರ್ಪಡಿಸುವುದು**

**2 ವಿದ್ಯಾರ್ಥಿಗಳು ರಾಷ್ಟ್ರ ನಾಯಕರ ವೇಷಭೂಷಣ ಧರಸಿಕೊಂಡು ಬರುವಂತೆತಿಳಿಸುವುದು.**

**3. ಭಾವೈಕ್ಯತಾ ಘೋಷಣೆಗಳನ್ನು ಹೇಳಿಸುವುದು.**




**ಈ** ಚಿತ್ರದಲ್ಲಿರುವ ಉಡುಪುಗಳು ಯಾವ ಯಾವ ರಾಜ್ಯಕ್ಕೆ ಸಂಬಂಧಿಸಿವೆ ಚರ್ಚಿಸಿ .

## ಸಾಹಿತ್ಯ

ಸಾಹಿತ್ಯದಲ್ಲಿ ಬಹುತ್ವವುಳ್ಳ ದೇಶ ಭಾರತವಾಗಿದೆ.ಡಾ. ವ್ಹಿ ಎಂ ಮಾಳಿ " ಸಾಹಿತ್ಯದ ಪರಮೋದ್ದೇಶ ರಸಾನುಭವಿ ಆಗಿದ್ದರೂ ಅದರ ಬಹುಮುಖ್ಯವಾದ ಆಸಕ್ತಿ ಮಾತ್ರ ಮನುಷ್ಯತ್ವದ ಶೋಧವಾಗಿದೆ .'Father of Indian literature' ಎಂದು ಕಾಳಿದಾಸನನ್ನು ಕರೆಯುತ್ತಾರೆ .

- ವಿವಿಧ ರೀತಿಯ ಭಾಷೆಗಳು ಸಂಸ್ಕೃತಿಯ ಆಧಾರದ ಮೇಲೆ ಸಾಹಿತ್ಯ ರಚನೆಯಾಗಿದೆ. ಬಹುತ್ವವುಳ್ಳ ಸಾಹಿತ್ಯವನ್ನು ಭಾಗಿದಾರರಲ್ಲಿ ಈ ಕೆಳಕಂಡ ಚಟುವಟಿಕೆಗಳನ್ನ ಹಮ್ಮಿಕೊಳ್ಳುವುದರ ಮೂಲಕ ಬಹುತ್ವದ ಕಲ್ಪನೆಯನ್ನು ಮೂಡಿಸಬಹುದಾಗಿದೆ.
- ವಿವಿಧ ಪ್ರಕಾರದ ಧರ್ಮಗಳ ಸಾಹಿತ್ಯಗಳನ್ನು ಹೆಸರಿಸಿ ಹಾಗೂ ಅವುಗಳಲ್ಲಿನ ಸಾಮ್ಯತೆಗಳನ್ನು ಚರ್ಚಿಸಿರಿ.
- ದೇಶಭಕ್ತಿ ಗೀತೆಗಳನ್ನು ಶಾಲಾ ಹಂತದಲ್ಲಿ ವಿದ್ಯಾರ್ಥಿಗಳಿಂದ ಹಾಡಿಸುವುದು.
- https://youtu.be/2Nc-tb3DZ8k?si=XqYqFUfgX8OxQSLI

**ಈ** ಮೇಲಿನ ಲಿಂಕನ್ನು ಬಳಸಿಕೊಂಡು ಎಲ್ಲರನ್ನೂ ಹಾಡಿಸುವುದು.ಅದರಲ್ಲಿರುವ ಸಾರಾಂಶಗಳನ್ನು ತಿಳಿಸಿ ಅದರಿಂದ ಭಾರತದಲ್ಲಿರುವ ಬಹುತ್ವ ಗುರುತಿಸಬಹುದಾಗಿದೆಯೇ?ಯೋಚಿಸಿ ನಿಮ್ಮ ಅಭಿಪ್ರಾಯವನ್ನು ತಿಳಿಸಿ.

ನಮ್ಮ ರಾಷ್ಟ್ರಗೀತೆಯಲ್ಲಿ ಬಹುತ್ವದ ಯಾವ ಯಾವ ಅಂಶಗಳು ಅಡಕವಾಗಿದೆ?

'ಇವನಾರವ ಇವನಾರವ ಇವನಾರವನೆಂದೆಣಿಸದಿರಯ್ಯಾ
'ಇವ ನಮ್ಮವ ಇವ ನಮ್ಮವ ಇವ ನಮ್ಮವನೆಂದೆಣಿಸಯ್ಯಾ.
ಕೂಡಲ-ಸಂಗಮ-ದೇವಾ
ನಿಮ್ಮ ಮನೆಯ ಮಗನೆಂದೆಣಿಸಯ್ಯಾ! – ಜಗಜ್ಯೋತಿ ಬಸವೇಶ್ವರರು

1. ಈ ವಚನದಲ್ಲಿನ ಸಾರವೇನು?
2. ಇಂತಹ ವಿಚಾರವಿರುವ ವಚನಗಳನ್ನು ಹೇಳಿಸಿರಿ

ಕುಲ ಕುಲ ಕುಲವೆಂದು ಹೊಡೆದಾಡದಿರಿ
ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ ಬಲ್ಲಿರಾ || ಪಲ್ಲವಿ ||
ಹುಟ್ಟದ ಯೋನಿಗಳಿಲ್ಲ ಮೆಟ್ಟದ ಭೂಮಿಗಳಿಲ್ಲ
ಅಟ್ಟು ಉಣ್ಣದ ವಸ್ತುಗಳಿಲ್ಲ ಕುಟಕಾಣಿಸ
ಬಂದು ಹಿರಿದೇನು ಕಿರಿದೇನು ನೆಟ್ಟನೆ ಸರ್ವಜ್ಞನ ನೆನೆಕಂಡ್ಯಾ ಮನುಜ || ೧ ||
ಜಲವೆ ಸಕಲ ಕುಲಕ್ಕೆ ತಾಯಲ್ಲವೆ ಜಲದ ಕುಲವನೇನಾದರೂ ಬಲ್ಲಿರಾ
ಜಲದೊಕುಳಿಯಂತೆ ಸ್ಥಿರವಲ್ಲ ಈ ದೇಹ ನೆಲೆಯ ಅರಿತು ನೀ ನೆನೆಕಂಡ್ಯಾ ಮನುಜ || ೨ ||
ಹರಿಯೇ ಸರ್ವೋತ್ತಮ
ಹರಿಯೇ ಸರ್ವೇಶ್ವರ
ಹರಿಮಯವೆಲ್ಲವೆನುತ ತಿಳಿದು
ಸಿರಿಕಾಗಿನೆಲೆಯಾದಿ ಕೇಶವರಾಯನ ಚರಣ ಕಮಲವ ಕೀರ್ತಿಸುವನೇ ಕುಲಜ || ೩ ||
ಕನಕದಾಸರು

ಈ ದಾಸ ಸಾಹಿತ್ಯದ ಆಶಯಗಳೇನು ಚರ್ಚಿಸಿರಿ

ಹೀಗೆ ಅನೇಕ ರೀತಿಯ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದರ ಮೂಲಕ ಭಾರತದ ಬಹುತ್ವದ ಕಲ್ಪನೆಯನ್ನು ಮೂಡಿಸಬಹುದಾಗಿದೆ.

ಭಾಷೆ -

ಭಾರತದ 2001 ರ ಜನಗಣತಿಯ ಪ್ರಕಾರ 122 ಪ್ರಮುಖ ಭಾಷೆಗಳು 1599 ಉಪಭಾಷೆಗಳಿವೆ.ಭಾರತದ ಸಂವಿಧಾನದ ಎಂಟನೇ ಅನುಸೂಚಿಯಲ್ಲಿ 22 ಭಾಷೆಗಳಿವೆ.ಇಂತಹ ಭಾಷಾ ವೈವಿಧ್ಯತೆಗಳನ್ನು ಹೊಂದಿರುವಂತಹ ಭಾರತದಲ್ಲಿ ಮಾತನಾಡುವ ಭಾಷೆ ಬೇರೆ ಆಗಿದ್ದರೂ ಅರ್ಥ ಒಂದೇ ಆಗಿರುತ್ತದೆ. ಉದಾಹರಣೆಗೆ ಕನ್ನಡದಲ್ಲಿ-ನಮಸ್ಕಾರ, ಹಿಂದಿಯಲ್ಲಿ - ನಮಸ್ತೆ, ತಮಿಳಿನಲ್ಲಿ - ವಣಕ್ಕಂ, ಪಂಜಾಬಿಯಲ್ಲಿ ಸತಿ ಶ್ರೀ ಅಕ್ಲಾ, ಉರ್ದುವಿನಲ್ಲಿ ಅಸಲಾಂ ಅಲೈಕುಂ,ಇಂತಹ ಭಾಷಾ ಬಹುತ್ವ ಭಾರತದಲ್ಲಿ ವಿದ್ಯಾರ್ಥಿಗಳಲ್ಲಿ ಬಹುತ್ವದ ಕಲ್ಪನೆಯನ್ನು ಮೂಡಿಸಲು ಈ ಕೆಳಕಂಡ ಚಟುವಟಿಕೆಗಳನ್ನು ಹಮ್ಮಿಕೊಳ್ಳಬಹುದಾಗಿದೆ.

- ಭಾರತ ದೇಶದ ನಕಾಶ ರಚಿಸಿ ರಾಜ್ಯವಾರು ಮಾತನಾಡುವ ಭಾಷೆಗಳನ್ನು ಗುರುತಿಸುವುದು. ( ಮಕ್ಕಳು ಹಾಗೂ ಅಧಿಕಾರಿ ವೃಂದದಿಂದ ಮಾಡಿಸಬಹುದಾಗಿದೆ )
- ವಿವಿಧ ಸಮುದಾಯದಲ್ಲಿ ಹಾಡುವ ಹಾಡುಗಳನ್ನು ಸಂಗ್ರಹಿಸುವುದು ( ವಿದ್ಯಾರ್ಥಿಗಳಿಂದ )
- ತರಗತಿಯಲ್ಲಿ ಮಾತೃಭಾಷೆಯನ್ನು ಬಳಸಲು ಮುಕ್ತವಾಗಿ ಅವಕಾಶಗಳನ್ನು ಕಲ್ಪಿಸಿ ಕೊಡುವುದು.
- ಲಿಪಿಗಳು ಇಲ್ಲದ ಭಾಷೆಗಳು ತಮ್ಮ ಅಸ್ತಿತ್ವವನ್ನು ಹೇಗೆ ಉಳಿಸಿಕೊಂಡಿದೆ ಎಂಬುದನ್ನು ಅಧಿಕಾರಿಗಳಿಗೆ ಚರ್ಚಿಸಲು ಅವಕಾಶ ನೀಡುವುದು.
- ವಿವಿಧ ಭಾಷೆಗಳಲ್ಲಿ ಭಾಷಣ ಸ್ಪರ್ಧೆ ಏರ್ಪಡಿಸುವುದು.

ಹೀಗೆ ಹಲವಾರು ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದರ ಮೂಲಕ ಭಾಷಾ ಬಹುತ್ವವನ್ನು ಬೆಳೆಸಬಹುದಾಗಿದೆ

# ಅಧ್ಯಾಯ 3

**ಉದ್ದೇಶ:**ವೈವಿಧ್ಯತೆಗಳನ್ನು ಮೀರಿ ವ್ಯಕ್ತಿ ಘನತೆಯನ್ನು ಗೌರವಿಸುವ ವಾತಾವರಣವನ್ನು ಶಾಲೆಗಳಲ್ಲಿ ಸೃಷ್ಟಿ ಮಾಡುವುದು .

ಭಾರತದ ಬಹುತ್ವ ಮತ್ತು ವ್ಯಕ್ತಿ ಘನತೆಯನ್ನು ಗೌರವಿಸುವುದರ ಜೊತೆಗೆ ಪ್ರತಿಯೊಂದು ಶಾಲೆಗಳಲ್ಲಿ ಇಂತಹ ವಾತಾವರಣವನ್ನು ನಾವು ಹೇಗೆ ಸೃಷ್ಟಿ ಮಾಡಬೇಕು ಎಂಬ ಚಿಂತನೆಗಳ ಚಟುವಟಿಕೆ ಅವಶ್ಯಕತೆ ಇದೆ. ಪ್ರತಿಯೊಂದು ಶಾಲೆಯು ಒಂದು ಸಣ್ಣ ದೇಶ ಅಥವಾ ಜಗತ್ತೇ ಎನ್ನಬಹುದು .ಏಕೆಂದರೆ ಪ್ರತಿಯೊಂದು ಶಾಲೆಯಲ್ಲಿ ವಿವಿಧ ಧರ್ಮದ ವಿವಿಧ ಜಾತಿಯ ಹಾಗೂ ವಿವಿಧ ವರ್ಗಗಳ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿರುತ್ತಾರೆ ಅವರು ಅವರದೇ ಆದ ಆಚಾರ, ವಿಚಾರ, ಸಂಪ್ರದಾಯ, ಉಡಿಗೆ , ತೊಡಿಗೆ, ಭಾಷೆ ,ಆಹಾರ, ವಿಹಾರ ಹೊಂದಿರುತ್ತಾರೆ . ಆದರೆ ಅವರೆಲ್ಲರೂ ನಾವು ಒಂದೇ ಶಾಲೆಯ ಹೆಮ್ಮೆಯ ವಿದ್ಯಾರ್ಥಿಗಳು ಎಂಬ ಭಾವನೆ ಮೂಡಿರುತ್ತದೆ. ಇಂತಹ ವೈವಿಧ್ಯತೆಯಿಂದ ಬಂದ ವಿದ್ಯಾರ್ಥಿಗಳಲ್ಲಿ ಅವರ ವ್ಯಕ್ತಿ ಘನತೆಯನ್ನು ಗೌರವಿಸಿ ಅವರ ವ್ಯಕ್ತಿತ್ವವನ್ನು ವಿಸ್ತಾರಗೊಳಿಸಿ ವಿಶ್ವಮಾನವನಾಗಿ ಮಾಡುವ ವಾತಾವರಣವನ್ನು ನಮ್ಮ ಶಾಲೆಗಳಲ್ಲಿ ಸೃಷ್ಟಿ ಮಾಡುವುದು. ಹಾಗಾದರೆ ನಮ್ಮ ಶಾಲೆಗಳಲ್ಲಿ ಯಾವ ಯಾವ ಚಟುವಟಿಕೆಗಳನ್ನು ಕೈಗೊಳ್ಳಬಹುದು ಎಂಬುದನ್ನು ನೋಡೋಣ.

ಭಾರತ ಒಂದು ವೈವಿಧ್ಯಮಯ ನಾಡು. ಇಲ್ಲಿಯ ವೈವಿಧ್ಯತೆ ಎಲ್ಲಾ ದೇಶಗಳಿಗೂ ಮಾದರಿಯಾಗಿದೆ .ಎಂಬುದನ್ನು ತೋರಿಸಿಕೊಟ್ಟಿದೆ ನಮ್ಮ ದೇಶದ ಸಂಸ್ಕೃತಿ ಪರಂಪರೆ ಇಷ್ಟು ಉಜ್ವಲವಾಗಿ ಪ್ರಕಾಶಿಸಲು ಈ ನಮ್ಮ ದೇಶದಲ್ಲಿನ ಆಚಾರ ವಿಚಾರ ಸಂಸ್ಕೃತಿಗಳೇ ಕಾರಣ. ಇಂತಹ ವೈವಿಧ್ಯಮಯವಾದ ಸಂಸ್ಕೃತಿಗಳನ್ನು ನಮ್ಮ ಶಾಲೆಯಲ್ಲಿ ಅನೇಕ ಚಟುವಟಿಕೆಗಳನ್ನು ಮಾಡುವುದರ ಮೂಲಕ ವಿದ್ಯಾರ್ಥಿಗಳ ವ್ಯಕ್ತಿ ಘನತೆಯನ್ನು ಎತ್ತರಕ್ಕೇರಿಸ ಬಹುದಾಗಿದೆ.ಪ್ರತಿಯೊಂದು ಶಾಲೆಯಲ್ಲಿಯೂ ಮೇಲು ಕೀಳು ಜಾತಿ ಧರ್ಮ ವರ್ಗ ಹಾಗೂ ವರ್ಣಭೇದ ಈ ಎಲ್ಲಾ ಅಂಶಗಳಿಂದ ದೂರವಿದ್ದು ಎಲ್ಲರೂ ಒಗ್ಗಟ್ಟಿನಿಂದ ಬಾಳಬೇಕು ಎಂಬುದನ್ನು ಶಾಲಾ ಆವರಣದಲ್ಲಿ ನಿರ್ಮಾಣ ಮಾಡಬೇಕು.ಇಂತಹ ವಾತಾವರಣವನ್ನು ಸೃಷ್ಟಿಸಲು ಈ ಕೆಳಗಿನ ಅಂಶಗಳನ್ನು ಗಮನಿಸಬೇಕು.

- ಮಗುವಿನ ಕುಟುಂಬದ ಹಿನ್ನೆಲೆಯನ್ನು ತಿಳಿದುಕೊಂಡು ಎಲ್ಲಾ ವಿದ್ಯಾರ್ಥಿಗಳನ್ನು ಗೌರವದಿಂದ ಕಾಣಬೇಕು.
- ಕಲಿಕಾ ಚಟುವಟಿಕೆಗಳಲ್ಲಿ ಮಕ್ಕಳಿಗೆ ಅವಕಾಶಗಳನ್ನು ಕಲ್ಪಿಸಿ ಕೊಡುವುದು
- ಲಿಂಗ ತಾರತಮ್ಯಕ್ಕೆ ಅವಕಾಶ ಕೊಡಬಾರದು
- ಪಾಲಕರ/ಸಮುದಾಯದವರ ಬೆಂಬಲ ಪಡೆಯುವುದು.
- ಎಲ್ಲರಿಗೂ ಸಮಾನವಾದ ಅವಕಾಶಗಳನ್ನು ಕಲ್ಪಿಸಿ ಕೊಡುವುದು.
- ಪ್ರತಿಯೊಂದು ಮಗುವಿನಲ್ಲಿ ಅಡಗಿರುವ ಕುಶಲತೆಯನ್ನು ಗಮನಿಸುವುದು ಮತ್ತು ಗೌರವಿಸುವುದು.

ಭಾರತದ ಬಹುತ್ವದಲ್ಲಿ ವ್ಯಕ್ತಿಯ ಘನತೆಯನ್ನು ಹೆಚ್ಚಿಸಲು ಶಾಲೆಯಲ್ಲಿ ಕೈಗೊಳ್ಳಬಹುದಾದ
ಚಟುವಟಿಕೆಗಳು ಈ ಕೆಳಕಂಡಂತೆ ಇವೆ.

೧ ಸಮವಸ್ತ್ರ ಧರಿಸುವಿಕೆ : ಸಮವಸ್ತ್ರ ಎನ್ನುವುದು ಒಂದು ಶಿಸ್ತು ಪಾಲನೆಯ ಮಹತ್ವ ಹೊಂದಿದೆ. ಶಾಲೆಯ ಸುಂದರ ವಾತಾವರಣಕ್ಕೆ ಇದು ತುಂಬಾ ಅವಶ್ಯಕ. ಯಾವುದೇ ಜಾತಿ ಮತ್ತು ವರ್ಗದ ಮಗು ಇರಲಿ ಈ ಶಾಲಾ ಸಮವಸ್ತ್ರ ಧರಿಸಿದೊಡನೆ ಅವನಲ್ಲಿ ಇಲ್ಲಿರುವ ನಾವೆಲ್ಲರೂ ಒಂದು ಎಂಬ ಚಿಂತನೆ ಮೂಡುತ್ತದೆ

೨ ಸಹ ಭೋಜನ : ಮನೆಯಲ್ಲಿ ವೈವಿಧ್ಯಮಯವಾದ ಊಟ ಉಪಹಾರವನ್ನು ಮಾಡಿದ ಮಗು ಶಾಲೆಗೆ ಬಂದೊಡನೆ ಎಲ್ಲಾ ವಿದ್ಯಾರ್ಥಿಗಳ ಜೊತೆ ಬೆರೆತುಕೊಂಡು ಶಾಲೆಯಲ್ಲಿಯೇ ತಯಾರಿಸಿರುವ ಬಿಸಿಯೂಟ ವನ್ನು ಸೇವಿಸುವ ಬಗ್ಗೆ ನಮ್ಮ ಮಕ್ಕಳಿಗೆ



ತಿಳುವಳಿಕೆಯನ್ನು ಕೊಡಬೇಕು. ಇದರಿಂದ ಸಹಪಂಕ್ತಿಯ ಭೋಜನದ ಮಹತ್ವ ವನ್ನು ಮಗು ಅರಿತು

೩ ಜನ್ಮದಿನಾಚರಣೆ : ನಮ್ಮ ಶಾಲೆಗಳಲ್ಲಿರುವ ಮಕ್ಕಳು ಎಲ್ಲರೂ ಸ್ಥಿತಿವಂತರಿರುವುದಿಲ್ಲ. ಎಲ್ಲರಿಗೂ ಅವರ ಮನೆಯಲ್ಲಿ ಜನ್ಮ ದಿನಾಚರಣೆಯನ್ನು ಆಚರಿಸಿಕೊಳ್ಳುವ ಅವಕಾಶ ಇರುವುದಿಲ್ಲ. ಅದಕ್ಕಾಗಿ ನಾವುಗಳು ಪ್ರತಿನಿತ್ಯ ಪ್ರಾರ್ಥನಾ ಸಮಯದಲ್ಲಿ ಅಂದು ಆ ದಿನಗಳಂದು ಜನ್ಮದಿನ ಇರುವ ವಿದ್ಯಾರ್ಥಿಗಳನ್ನು ಗುರುತಿಸಿ ಅವರನ್ನು ಮೇಲೆ ಕರೆದು ಶುಭ ಹಾರೈಸಿ, ಪುಷ್ಪಗುಚ್ಛ ಅಥವಾ ಒಂದು ಕಿರು ಪುಸ್ತಕವನ್ನು ಕೊಟ್ಟು ಗೌರವಿಸುವ ಮುಖಾಂತರ ವ್ಯಕ್ತಿಘನತೆಯನ್ನು ಗೌರವಿಸಬಹುದಾಗಿದೆ.

೪ ಲಿಂಗತಾರತಮ್ಯ ಮಾಡದಿರುವುದು : ಪ್ರತಿಯೊಂದು ಶಾಲೆಗಳಲ್ಲಿಯೂ ದಾಖಲಾದ ಮಕ್ಕಳನ್ನು ವಾತ್ಸಲ್ಯಮಯವಾಗಿ ಕಾಣಬೇಕು.ಇಲ್ಲಿ ಯಾವುದೇ ಲಿಂಗ ತಾರತಮ್ಯಕ್ಕೆ ಅವಕಾಶವನ್ನು ಕೊಡಬಾರದು.ಗಂಡು ಹೆಣ್ಣು ಎಂಬ ವ್ಯತ್ಯಾಸವನ್ನು ಮಾಡದೆ ಎಲ್ಲರನ್ನೂ ಸಮಾನವಾಗಿ ಕಾಣಬೇಕು.ಇದರಿಂದ ನಾವೆಲ್ಲರೂ ಒಂದೇ ಎಂಬ ವ್ಯಕ್ತಿತ್ವ ಮೂಡುತ್ತದೆ.

೫_ಪ್ರಶ್ನೆ ಮಾಡುವಿಕೆ : ಯಾವುದೇ ವಿಷಯಗಳನ್ನು ಮಕ್ಕಳು ಪ್ರಶ್ನೆ ಮಾಡಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದಾಗ ನಾವುಗಳು ಸರಿಯಾಗಿ ಯೋಚಿಸಿ ಮಗುವಿಗೆ ಉತ್ತಮ ಮಾರ್ಗದರ್ಶನ ಮಾಡಿದಾಗ ಆ ಮಗುವು ತನ್ನನ್ನು ತಾನು ತಿದ್ದಿಕೊಂಡು ಅರಿತುಕೊಂಡು ತನ್ನ ಜ್ಞಾನದ ವಿಸ್ತರ ಮಾಡಿಕೊಳ್ಳುವುದರ ಜೊತೆಗೆ ಅವನ ವ್ಯಕ್ತಿಘನತೆ ಹೆಚ್ಚಾಗುತ್ತದೆ.

೬ ಒಡನಾಟ ಬೆಳಸುವುದು : ನಮ್ಮ ಶಾಲೆಯಲ್ಲಿರುವ ಪ್ರತಿಯೊಂದು ಮಕ್ಕಳ ಒಡನಾಟವನ್ನು ನಾವು ಗಮನಿಸಬೇಕು. ಇಲ್ಲಿ ನಾವು ಯಾವುದೇ ಕೆಲಸಗಳನ್ನು ಮಾಡಿಸುವಾಗ ಯಾವುದೇ ಮಗುವನ್ನು ಅವನ ಹೆಸರನ್ನು ಕೂಗಿ ಕರೆದು ಸಂಬೋಧನೆಯನ್ನು ಮಾಡಬೇಕು. (ಯಾವುದೇ ತರನಾಗಿ ಅಡ್ಡ ಹೆಸರು ಹಿಡಿದು ಕರೆಯಬಾರದು) ಇದರಿಂದ ಮಗುವಿನಲ್ಲಿ ಉತ್ಸಾಹ ಇಮ್ಮಡಿಗೊಂಡು ವ್ಯಕ್ತಿಯ ಘನತೆಯು ಹೆಚ್ಚಾಗುತ್ತದೆ

೭ ಪಾಲಕ/ಪೋಷಕ ಹಾಗೂ ಸಮುದಾಯದವರ ಬೆಂಬಲ ಪಡೆದುಕೊಳ್ಳುವುದು : ನಾವುಗಳು ನಮ್ಮ ತರಗತಿಯ ನಮ್ಮ ಶಾಲೆಯ

ಎಲ್ಲಾ ಪಾಲಕ/ಪೋಷಕ ಹಾಗೂ ಸಮುದಾಯದವರನ್ನು ಅತ್ಯಂತ ಹತ್ತಿರದಿಂದ ವಿಶ್ವಾಸದಿಂದ ಕಾಣಬೇಕು. ಜೊತೆಗೆ ಅವರ ಸಹ ಸಂಬಂಧವನ್ನು ಗಳಿಸಿಕೊಂಡು ಪ್ರತಿಯೊಂದು ವಿದ್ಯಾರ್ಥಿಗಳ ಏಳಿಗೆಗೆ ಚರ್ಚಿಸಿ ಅವರಿಂದ ಬೆಂಬಲವನ್ನು ಪಡೆದುಕೊಳ್ಳಬೇಕು.

೮ ಶಾಲಾ ಕಾರ್ಯಕ್ರಮಗಳು : ನಮ್ಮ ಶಾಲೆಯಲ್ಲಿ ಆಚರಿಸುವ ಪ್ರತಿಭಾಕಾರಂಜಿ, ಕ್ರೀಡಾಕೂಟ, ರಾಷ್ಟ್ರೀಯ ಹಬ್ಬಗಳ ದಿನಾಚರಣೆ, ಶಾಲಾ ಸಂಸತ್ ಹೀಗೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡ ಸಂದರ್ಭದಲ್ಲಿ ಎಲ್ಲಾ ಮಕ್ಕಳು ಸರಿಯಾಗಿ ಪಾಲ್ಗೊಳ್ಳುವ ಬಗ್ಗೆ ನಾವುಗಳು ಸರಿಯಾದ ಮಾರ್ಗದರ್ಶನ ಮಾಡಿದಾಗ ಮಕ್ಕಳಲ್ಲಿ ವ್ಯಕ್ತಿಘನತೆ ಹೆಚ್ಚಾಗುತ್ತದೆ. ಇದರಿಂದ ಪ್ರತಿಯೊಂದು ಮಗುವು ತನ್ನಲ್ಲಿರುವ ಪ್ರತಿಭೆಯನ್ನು ಹೊರಸೂಸಿದಾಗ ನಾವುಗಳು ಪ್ರೋತ್ಸಾಹ ಕೊಟ್ಟು ಮಗುವಿನ ಪ್ರತಿಭೆಗೆ ಬೆಳಕನ್ನು ಚೆಲ್ಲಬೇಕು.

೯ ದೇಶಭಕ್ತಿ-ದೇಶಪ್ರೇಮ : ನಮ್ಮ ಶಾಲೆಯಲ್ಲಿರುವ ಮಕ್ಕಳಿಗೆ ನಮ್ಮ ದೇಶದ ಬಗ್ಗೆ ದೇಶಾಭಿಮಾನ ಮೂಡಿಸಲು ದೇಶಭಕ್ತಿ ಗೀತೆಗಳು: ಭಾವೈಕ್ಯತಾ ಗೀತೆಗಳು ಹೇಳುವುದರ ಜೊತೆಗೆ ರಾಷ್ಟ್ರಕಾಗಿ ಹೋರಾಡಿದ ಮಹನೀಯರುಗಳ ಭಾವಚಿತ್ರ ತೋರಿಸುತ್ತಾ ಅವರ ಬಗ್ಗೆ ತಿಳಿಸಿಕೊಡುವುದರ ಜೊತೆಗೆ ನಮ್ಮ ಮಕ್ಕಳಲ್ಲಿ ವ್ಯಕ್ತಿಘನತೆಯನ್ನು ಹೆಚ್ಚಿಸಬಹುದು.

೧೦ ವೈವಿಧ್ಯಮಯವಾದ ವೃತ್ತಿಗಳನ್ನು ಗೌರವಿಸುವುದು: ನಾವುಗಳು ನಮ್ಮ ಸಮಾಜದಲ್ಲಿರುವ ವಿವಿದ ವೃತ್ತಿಗಳನ್ನು ಅವಲಂಬಿಸಿರುವ ಜನರನ್ನು ಗುರುತಿಸಿ ಮಕ್ಕಳನ್ನು ಅವರ ಹತ್ತಿರ ಕರೆದುಕೊಂಡು ಹೋಗಿ ಅವರೊಂದಿಗೆ ಸಂದರ್ಶನ ಏರ್ಪಡಿಸುವುದರ ಜೊತೆಗೆ ಆ ವ್ಯಕ್ತಿಗಳ ಘನತೆಯನ್ನು ಅರಿತು ಮಗುವಿನಲ್ಲಿ ವ್ಯಕ್ತಿ ಘನತೆಯ ಪ್ರಾಮುಖ್ಯತೆಯನ್ನು ತಿಳಿಸಿ ಕೊಡುವುದು.

# ಅಧ್ಯಾಯ 4

ಉದ್ದೇಶ : ಶಿಕ್ಷಣ ಕ್ಷೇತ್ರದಲ್ಲಿ ವ್ಯಕ್ತಿಗಳ ಸಾಂಸ್ಕೃತಿಕ ಹಿನ್ನೆಲೆಯನ್ನು ಆಧರಿಸಿ ಯಾವುದೇ ತಾರತಮ್ಯ ಮಾಡಿದಂತೆ ಸ್ನೇಹಮಯ ವಾತಾವರಣವನ್ನು ಕಲ್ಪಿಸಿಕೊಡುವುದು.

ಶಾಲೆಗಳಲ್ಲಿ ವಿವಿಧ ವಿದ್ಯಾರ್ಥಿಗಳ ನಡುವೆ ತಾರತಮ್ಯ ಮಾಡುವುದರಿಂದ ಅವರಲ್ಲಿ ದ್ವೇಷ ಭಾವನೆಯನ್ನು ಬಿತ್ತಿರುವುದರ ಮೂಲಕ ಸ್ನೇಹಮಯ ವಾತಾವರಣವನ್ನು ಕಲಕಿದಂತೆ ಆಗುತ್ತದೆ. ಆದ್ದರಿಂದ ಈ ಕೆಳಕಂಡ ಚಟುವಟಿಕೆಗಳಲ್ಲಿ ಶಿಕ್ಷಕರು ಹಾಗೂ ಮುಖ್ಯ ಶಿಕ್ಷಕರು ಬಹಳ ಎಚ್ಚರಿಕೆಯಿಂದ ಮಕ್ಕಳನ್ನು ತೊಡಿಗಿಸಿಕೊಳ್ಳಬೇಕಾಗುತ್ತದೆ.

1 ವಿದ್ಯಾರ್ಥಿಗಳ ಮನೆಗಳಲ್ಲಿ ವಿವಿಧ ರೀತಿಯ ಆಹಾರ ಪದ್ಧತಿ ರೂಡಿಯಲ್ಲಿದ್ದರೂ ಶಾಲೆಗೆ ಬಂದಾಗ ಎಲ್ಲರೂ ಒಟ್ಟಾಗಿ ಯಾವುದೇ ತಾರತಮವಿಲ್ಲದೆ ಸರ್ಕಾರದ ಮಹತ್ವಕಾಂಕ್ಷಿ ಯೋಜನೆ ಅಡಿ ಬಿಸಿ ಯೂಟವನ್ನು ಎಲ್ಲರೂ ಒಟ್ಟಾಗಿ ಸೇವಿಸುವುದು ಈ ಮೂಲಕ ಮಕ್ಕಳಲ್ಲಿ ಸ್ನೇಹ ಮಯ ವಾತಾವರಣ ಉಂಟಾಗುತ್ತದೆ.

2 ವಿಭಿನ್ನ ಪ್ರತಿಭೆಗಳಿಗೆ ಅವಕಾಶ:

ಶಾಲೆಯಲ್ಲಿ ನಡೆಯುವ ವಿವಿಧ ಪಠ್ಯೇತರ ಚಟುವಟಿಕೆಗಳಾದ ಕ್ರೀಡಾಕೂಟಗಳು ಪ್ರತಿಭಾ ಕಾರಂಜಿ, ಮಕ್ಕಳ ಮಹಿಳಾ ಕಲಿಕಾ ಸೌಲಭ್ಯಗಳು, ಯುವ ಸಂಸತ್ತು ವಿವಿಧ ವಿಷಯಗಳ ವಸ್ತು ಪ್ರದರ್ಶನ, ಚಿತ್ರಕಲೆ, ರಂಗೋಲಿ ಇತ್ಯಾದಿ ಸ್ಪರ್ಧೆಗಳಲ್ಲಿ ಎಲ್ಲ ಮಕ್ಕಳಿಗೂ ಪ್ರತಿಭೆಗೆ ಅನುಸಾರವಾಗಿ ಅವಕಾಶಗಳನ್ನು ಕಲ್ಪಿಸಿ ತನ್ಮೂಲಕ ಸೂಕ್ತವಾದ ಪ್ರತಿಭೆಗಳ ಆವರಣ ಗೊಳಿಸುವುದು ಆರೋಗ್ಯಕರ ಸ್ಪರ್ಧಾ ಮನೋಭಾವನೆ ಬೆಳೆಸುವುದರ ಮೂಲಕ ಸ್ನೇಹ ಮಯ ವಾತಾವರಣ ನಿರ್ಮಿಸುವುದು.

3 ಶೈಕ್ಷಣಿಕ ಪ್ರವಾಸ:

ನಮ್ಮ ನಾಡು ನುಡಿ ಸಂಸ್ಕೃತಿ ಪರಂಪರೆ ಗತವೈಭವ ಬಿಂಬಿಸುವ ಐತಿಹಾಸಿಕ ಸ್ಥಳಗಳಿಗೆ ವಿದ್ಯಾರ್ಥಿಗಳನ್ನು ಪ್ರವಾಸ ಕರೆದುಕೊಂಡು ಹೋಗುವುದರ ಮೂಲಕ ಸೌಹಾರ್ದತೆಯನ್ನು ಬೆಳೆಸುವುದು.

4 ಪ್ರಾಕೃತಿಕ ವಿಕೋಪಗಳಲ್ಲಿ ಸಹಭಾಗಿತ್ವ :

ಪ್ರಾಕೃತಿಕ ವಿಕೋಪಗಳಾದ ಅತಿವೃಷ್ಟಿ, ಅನಾವೃಷ್ಟಿ ,ಭೂಕಂಪ, ಚಂಡ ಮಾರುತಗಳು, ಸುನಾಮಿ ಇತ್ಯಾದಿ ಸಂಭವಿಸಿದಾಗ ಯಾವುದೇ ತಾರತಮ್ಯವಿಲ್ಲದೆ ಎಲ್ಲರೂ ಸಹಾಯಹಸ್ತ ನೀಡುವುದು.

ವಿದ್ಯಾರ್ಥಿಗಳ ಕ್ಷೇತ್ರ ಭೇಟಿ ಸಂದರ್ಶನ ಧನ ಸಹಾಯ ಇತ್ಯಾದಿ ಏರ್ಪಡಿಸಿ ಸ್ನೇಹಮಯ ವಾತಾವರಣ ನಿರ್ಮಿಸುವುದು.

5 ಸರ್ಕಾರದ ಯೋಜನೆಗಳ ಪರಿಣಾಮಕಾರಿ ಜಾರಿ:

ಶಿಕ್ಷಣ ಕ್ಷೇತ್ರದಲ್ಲಿ ಯಾವುದೇ ತಾರತಮವಿಲ್ಲದೆ ಎಲ್ಲ ವರ್ಗ ಮತ್ತು ಜನಾಂಗದವರಿಗೂ ವಿವಿಧ ಯೋಜನೆಗಳನ್ನು ತಲುಪಿಸುವುದು.

6 ಶಿಕ್ಷಣ ಕ್ಷೇತ್ರದಲ್ಲಿ ವ್ಯಕ್ತಿಗಳ ಸಾಂಸ್ಕೃತಿಕ ಹಿನ್ನೆಲೆಯನ್ನು ಆಧರಿಸಿ ಯಾವುದೇ ತಾರತಮ್ಯ ಮಾಡಿದಂತೆ ಸ್ನೇಹವಾದ ವಾತಾವರಣವನ್ನು ಕಲ್ಪಿಸಿಕೊಡುವುದು. ಭಾರತದಲ್ಲಿ ವಿವಿಧ ಜನಾಂಗಗಳು ಧರ್ಮಗಳಿದ್ದರೂ ಸಾಂಸ್ಕೃತಿಕ ಹಿನ್ನೆಲೆ ಏನಾದರೂ ವರ್ತನೆ ಮಾಡಿದಂತೆ ಸ್ನೇಹಮಯವಾದ ವಾತಾವರಣವನ್ನು ಕಲ್ಪಿಸುವುದು.

ಚಟುವಟಿಕೆ 1 ಲಿಂಗ ತಾರತಮ್ಯ ಹೋಗಲಾಡಿಸುವುದು

ಶಾಲೆಗಳಲ್ಲಿ ವಿವಿಧ ಕಾರ್ಯಕ್ರಮ ಸ್ಪರ್ದೆಗಳನ್ನು ಏರ್ಪಡಿಸುವಾಗ ಬಾಲಕ ಮತ್ತು ಬಾಲಕಿಯರಿಗೆ ಸಮಾನವಾದ

ಅವಕಾಶಗಳನ್ನು ನೀಡುವುದು ಉತ್ತಮ, ಕೆಲವು ಚಟುವಟಿಕೆಗಳನ್ನು ನಿರ್ದಿಷ್ಠವಾಗಿ ಬಾಲಕರಿಗೆ ಅಥವಾ ಬಾಲಕಿಯರಿಗೆ ಮಾತ್ರ ನೀಡದಂತೆ ಎಚ್ಚರವಹಿಸಬೇಕಾಗುತ್ತದೆ.




ಕಲ್ಪಿತ ಪ್ರಸಂಗ

ರಾಜೇಶ್ ಮೇಡಂ ಚಾಕ್ಲೆಟ್ ತಗೋಳ್ಳಿ
ಟೀಚರ್: ಯಾಕಪ್ಪ ಏನು ವಿಶೇಷ?
ರಾಜೇಶ್: ಇವತ್ತು ನನ್ನ ಹುಟ್ಟುಹಬ್ಬ ಮೇಡಂ.
ಟೀಚರ್ :ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು ದೇವರು ಚೆನ್ನಾಗಿಟ್ಟಿರಲಿ.
ರಾಜೇಶ್ :ಧನ್ಯವಾದಗಳು ಮೇಡಂ ಟೀಚರ್: ಸರಿ ಮಕ್ಕಳೇ ಪಾಠ ಆರಂಭಿಸೋಣವೇ.
ಮೇರಿ :ಮೇಡಂ ಫಾತಿಮಾ  ಅಳುತ್ತಿದ್ದಾಳೆ.
ಟೀಚರ್ :ಯಾಕೆ ಫಾತಿಮಾ ಏನಾಯ್ತು ಯಾಕೆ ಅಳುತ್ತಿರುವೆ?
ಫಾತಿಮಾ: ಟೀಚರ್ ಇವತ್ತು ನನ್ನ ಹುಟ್ಟುಹಬ್ಬ ಕೂಡ ಇದೆ; ಆದರೆ ನಮ್ಮ ಮನೆಯಲ್ಲಿ ನೀನು ಹುಡುಗಿ ನಿನಗೆ ಏಕೆ ಈ ಹುಟ್ಟು ಹಬ್ಬದ ಆಚರಣೆ ಎಂದರು.
ಟೀಚರ್:ಅಯ್ಯೋ ಹುಚ್ಚು ಹುಡುಗಿ ನೀನು ನಿನ್ನ ತಂದೆ-ತಾಯಿಗಳು ಸುಮ್ಮನೆ ಹಾಗೆ ತಮಾಷೆಗಾಗಿ ಹೇಳಿರುತ್ತಾರೆ. ನೀನು ಇದನ್ನು ವಿಚಾರ ಮಾಡಬೇಡ ಬಾ ಇಲ್ಲಿ ಎಂದು ಕರೆದು ಸಮಾಧಾನ ಮಾಡಿ ರಾಜೇಶ್ ಮತ್ತು ಫಾತಿಮಾಳನ್ನು ಕರೆದು ಇಬ್ಬರು ಸೇರಿ ಎಲ್ಲರಿಗೂ ಚಾಕಲೇಟ್ ಹಂಚಿರಿ ಎಂದು ಹೇಳಿದರು.

| |
|---|
| ಈ ಮೇಲಿನ ಕಥೆಯಿಂದ ನೀವು ಏನು ಅರ್ಥೈಸಿಕೊಂಡರೆ ? ಎಂಬುದನ್ನು ಚರ್ಚಿಸಿರಿ. |

ಆರ್ಥಿಕತೆಯ ಆಧಾರದ ಮೇಲೆ ತಾರತಮ್ಯ ನಿವಾರಣೆ

ಒಂದು ದಿನ ಶಿಕ್ಷಕರು  ಪಾಠ ಮಾಡುವಾಗ  ತರಗತಿ  ಕೊಣೆಯಲ್ಲಿ  ಒಂದು ದೃಶ್ಯ  ಗಮನಿಸುತ್ತಾರೆ
ರಾಜು ಎಂಬ ಶ್ರೀಮಂತ ಬಾಲಕ ಚಾಕ್ಲೇಟ್  ತಿಂದು ಹಾಳೆಯನ್ನು ಅಲ್ಲೇ ಬಿಸಾಕುತ್ತಾನೆ. ಆಗ ರವಿ ಎಂಬ ವಿದ್ಯಾರ್ಥಿ ಅದನ್ನು ನೋಡಿ ಆ ಹಾಳೆಯನ್ನು ಕಸದ ಬುಟ್ಟಿಗೆ ಹಾಕುತ್ತಾನೆ. ಮತ್ತೊಂದು ದಿನ ಶಿಕ್ಷಕರು ತರಗತಿ ಕೋಣೆಯಲ್ಲಿ ಮತ್ತೊಂದು ಘಟನೆಯನ್ನು ಗಮನಿಸುತ್ತಾರೆ. ಆದರೆ ರವಿ ಎಂಬ ಬಡ ಬಾಲಕ ಒಂದು ಹಾಳೆಯನ್ನು ಬಿಸಾಕಿರುತ್ತಾನೆ. ಅದನ್ನು ಎತ್ತಿ ಹಾಕಲು ಶಿಕ್ಷಕರ ರಾಜುಗೆ ಹೇಳಿದಾಗ ಅದನ್ನು ನಿರಾಕರಿಸುತ್ತಾನೆ.

| |
|---|
| ವಿದ್ಯಾರ್ಥಿಯ ಮನ ಪರಿವರ್ತಿಸುವಲ್ಲಿ ಕೈಗೊಂಡ ಕ್ರಮವೇನು? |

’ಮಗು ಮಾನವನಾಗಿ, ಉತ್ತಮ ನಾಗರಿಕನಾಗಿ, ಪ್ರಜ್ಞಾವಂತನಾಗಿ ಯಾವುದೇ ತಾರತಮ್ಯವಿಲ್ಲದೆ ಸ್ನೇಹಮಯವಾಗಿ ತನ್ನ ಸುತ್ತಮುತ್ತಲಿನವರೊಂದಿಗೆ ಘನತೆ ಗೌರವಗಳಿಂದ ವರ್ತಿಸುವಂತೆ ಮಾಡುವುದೇ ಶಿಕ್ಷಣ’ – ಡಾ.ಎ.ಪಿ.ಜೆ.ಅಬ್ದುಲ್ ಕಲಾಂ

’ಓದುವುದನ್ನು, ಬರೆಯುವುದನ್ನು ಕಲಿಯುವುದು ವಿದ್ಯಾಭ್ಯಾಸವಲ್ಲ; ಪರಸ್ಪರ ಸ್ನೇಹ ಮತ್ತು ಸಾಮರಸ್ಯವನ್ನು ಕಲಿಸುವುದೇ ವಿದ್ಯಾಭ್ಯಾಸ’ – ಮಹಾತ್ಮ ಗಾಂಧೀಜಿ

ಶಿಕ್ಷಣದಲ್ಲಿ ತಾರತಮ್ಯ ನಿರ್ದಿಷ್ಟ ಜನಾಂಗೀಯ ಸಾಮಾಜಿಕ ಆರ್ಥಿಕ ಸಾಂಸ್ಕೃತಿಕವಾಗಿ ಮತ್ತು ಭಾಷಿಕವಾಗಿ ವೈವಿಧ್ಯಮಯವಾದ ಗುಂಪುಗಳು ಸಾಮಾನ್ಯವಾಗಿ ಪ್ರದರ್ಶಿಸುತ್ತವೆ. ಇದು ಮಗುವಿನ ಜನಾಂಗ ಜನಾಂಗೀಯತೆ ವಿಶೇಷ ಶಿಕ್ಷಣ ಸೇವೆಗಳ ಅಗತ್ಯವಿರುವಂತೆ ತಪ್ಪಾಗಿ ಗುರುತಿಸಲ್ಪಡುವ ಸಾಧ್ಯತೆ ಕಂಡು ಬರುತ್ತದೆ. ಇದರಿಂದ ಶಿಕ್ಷಣ ಕ್ಷೇತ್ರದಲ್ಲಿ ನ್ಯಾಯ ಸಮ್ಮತಿ ಸಮಾನತೆ ಮತ್ತು ವಿದ್ಯಾರ್ಥಿಗಳ ಶೈಕ್ಷಣಿಕ ಫಲಿತಾಂಶಗಳ ಮೇಲೆ ಸಂಭಾವ್ಯ ಪ್ರಭಾವ ಬೀರುವ ಮೂಲಕ ಕಳವಳವನ್ನು ಉಂಟುಮಾಡುತ್ತದೆ.

# ಅಧ್ಯಾಯ 5

ಉದ್ದೇಶ : ಭಾರತದ ಸಂವಿಧಾನದ ತತ್ವಗಳು ಬಹುತ್ವ ಮತ್ತು ವ್ಯಕ್ತಿ ಘನತೆಯನ್ನು ಘೋಷಿಸುತ್ತಿರುವ ಅಂಶಗಳ ಬಗ್ಗೆ ಎಲ್ಲಾ ಭಾಗಿದಾರರಲ್ಲೂ ಅರಿವು ಮೂಡಿಸುವುದು

ಬಹುತ್ವವು ಪ್ರಜಾಪ್ರಭುತ್ವದ ಮಾದರಿಯಾಗಿ ಕಾರ್ಯನಿರ್ವಹಿಸುತ್ತಿದೆ. ಅಲ್ಲಿ ವಿವಿಧ ಗುಂಪುಗಳು ತಮ್ಮ ಅಭಿಪ್ರಾಯಗಳನ್ನು ಮತ್ತು ಆಲೋಚನೆಗಳನ್ನು ಧ್ವನಿಸಬಹುದು ರಾಜಕೀಯ ಅಥವಾ ತಾತ್ವಿಕ ವರ್ತನೆಯಾಗಿ ವ್ಯಕ್ತಪಡಿಸಬಹುದು. ಭಾರತದ ಯಾವುದೇ ಮೂಲೆಯಲ್ಲಿ ಹೋಗಿ ನೋಡಿದರು ಅಲ್ಲಿ ಇರುವುದು ಬಹುಜನರ ಸಂಸ್ಕೃತಿ ಬಹುಜನರ ಆಚಾರ ವಿಚಾರಗಳು. ಎಲ್ಲಾ ಜಾತಿ ಮತ ಪಂಥ ಇವೆಲ್ಲದರ ಗಟ್ಟಿನೆಲೆ ಇರುವುದು ಬಹುತ್ವದಲ್ಲಿ. ಈ ಅಂಶಗಳನ್ನು ಆಧರಿಸಿ ರಚನೆಯಾಗಿರುವುದು ನಮ್ಮ ಭವ್ಯ ಭಾರತದ ಸಂವಿಧಾನ.

ಭಾರತದ ಸಂವಿಧಾನದ ಪೀಠಿಕೆ



ಭಾರತದ ಸಂವಿಧಾನ


ಪೀಠಿಕೆ

ಭಾರತದ ಜನತೆಯಾದ ನಾವು,
ಭಾರತವನ್ನು ಸಾರ್ವಭೌಮ, ಸಮಾಜವಾದಿ, ಧರ್ಮನಿರಪೇಕ್ಷ
ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ
ರೂಪಿಸುವುದಕ್ಕಾಗಿ;
ಭಾರತದ ಎಲ್ಲಾ ಪ್ರಜೆಗಳಿಗೆ
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು;
ವಿಚಾರ, ಅಭಿವ್ಯಕ್ತಿ, ನಂಬಿಕೆ, ಧರ್ಮ ಮತ್ತು
ಉಪಾಸನೆಯ ಸ್ವಾತಂತ್ರ್ಯವನ್ನು;
ಸ್ಥಾನಮಾನ ಮತ್ತು ಅವಕಾಶಗಳ ಸಮಾನತೆಯನ್ನು
ದೊರೆಯುವಂತೆ ಮಾಡುವುದಕ್ಕಾಗಿ;
ವ್ಯಕ್ತಿಗೌರವ, ದೇಶದ ಏಕತೆ ಮತ್ತು ಸಮಗ್ರತೆಗಾಗಿ ಎಲ್ಲರಲ್ಲಿ
ಭ್ರಾತೃತ್ವ ಭಾವನೆಯನ್ನು ಮೂಡಿಸುವುದಕ್ಕೆ
ದೃಢಸಂಕಲ್ಪ ಮಾಡಿ,
ನಮ್ಮ ಸಂವಿಧಾನ ಸಭೆಯಲ್ಲಿ
1949ನೆಯ ಇಸವಿಯ ನವೆಂಬರ್ ತಿಂಗಳ 26ನೇ ದಿನದಂದು
ಈ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡು
ಅಂಗೀಕರಿಸಿ, ಶಾಸನವಾಗಿ ವಿಧಿಸಿಕೊಂಡಿದ್ದೇವೆ.

ಪ್ರತಿದಿನ ಶಾಲೆಯಲ್ಲಿ ಬೆಳಗಿನ ಪ್ರಾರ್ಥನಾ ಸಮಯದಲ್ಲಿ ಸಂವಿಧಾನ ಪೀಠಿಕೆಯನ್ನು ಹೇಳಿಸಲಾಗುತ್ತಿದೆ. ಇದರ ಹಿಂದಿನ ಉದ್ದೇಶವೇನು? ಚರ್ಚಿಸಿರಿ .

ಈ ಹಿಂದೆ ಪ್ರಜಾಸತ್ತಾತ್ಮಕ ಗಣರಾಜ್ಯ ಎಂಬ ಪದಗಳನ್ನು ಮಾತ್ರ ಬಳಸಲಾಗಿತ್ತು ಆದರೆ 1976ರಲ್ಲಿ ಸಂವಿಧಾನಕ್ಕೆ 42ನೇ ತಿದ್ದುಪಡಿ ತರುವ ಮೂಲಕ ಸಮಾಜವಾದಿ ಮತ್ತು ಜಾತ್ಯತೀತ ಎಂಬ ಪದಗಳನ್ನು ಸೇರಿಸಲಾಯಿತು ಮತ್ತು ರಾಷ್ಟ್ರದ ಏಕತೆ ಮತ್ತು ಸಮಗ್ರತೆ ಎಂಬ ವಾಕ್ಯವನ್ನು ರಾಷ್ಟ್ರದ ಏಕತೆ ಎಂಬುದಾಗಿ ಬದಲಾಯಿಸಲಾಯಿತು .ಸಮಗ್ರತೆ ಎಂಬ ಪದವನ್ನು ಮೂಡಿಸಲು ಮತ್ತು ಪ್ರತ್ಯೇಕವಾದಕ್ಕೆ ತಿಲಾಂಜಲಿ ನೀಡಲು ತೀರ್ಮಾನಿಸಲಾಯಿತು. ಭಾರತೀಯ ಪ್ರಜೆಗಳಾದ ನಾವು ನಮ್ಮ ಸಂವಿಧಾನವನ್ನು ಭಾರತೀಯರೇ ರಚಿಸಿ ಶಾಸನಗೊಳಿಸಿ, ತಮಗೆ ತಾವೇ ಅರ್ಪಿಸಿಕೊಂಡಿದ್ದೇವೆ ಎಂದು ಪ್ರಸ್ತಾವನೆ ಘೋಷಿಸುತ್ತದೆ. ಅಂದರೆ ಭಾರತ ಸಂವಿಧಾನವನ್ನು ಭಾರತ ಜನರೇ ರಚಿಸಿದ್ದು ಅವರೇ ಅಧಿಕಾರದ ಮೂಲವಾಗಿದ್ದಾರೆ .ಅದು ಜನತೆಯ ಪರಮಾಧಿಕಾರ ವ್ಯಕ್ತಪಡಿಸುತ್ತದೆ. ಸಂವಿಧಾನ ರಚನಕಾರರು ರಾಷ್ಟ್ರದ ಎಲ್ಲಾ ವರ್ಗಗಳ ಜನರನ್ನು ಪ್ರತಿನಿಧಿಸಿದ್ದರು. ಇದು ಬಹುತ್ವ ಭಾರತದಲ್ಲಿ ವ್ಯಕ್ತಿ ಘನತೆಯನ್ನು ಎತ್ತಿ ತೋರಿಸುತ್ತದ

ಭಾರತದ ಸಂವಿಧಾನ ರಚನಾ ಸಭೆಯ ಸದಸ್ಯರ ಚಿತ್ರ



## ಸಾರ್ವಭೌಮ ರಾಷ್ಟ್ರ

ಭಾರತವು ಒಂದು ಸರ್ವತಂತ್ರ ಸಾರ್ವಭೌಮ ರಾಷ್ಟ್ರವಾಗಿದೆ ಏಕೆಂದರೆ ಭಾರತ ಈಗ ಯಾರ ಅಧೀನದಲ್ಲೂ ಇಲ್ಲ ಆಂತರಿಕ ಹಾಗೂ ಬಾಹ್ಯ ವ್ಯವಹಾರಗಳಲ್ಲಿ ಸ್ವತಂತ್ರವಾಗಿ ನಿರ್ಣಯಗಳನ್ನು ತೆಗೆದುಕೊಳ್ಳುವ ವಿದೇಶಾಂಗ ನೀತಿ ರೂಪಿಸುವ ಅಧಿಕಾರ ಹೊಂದಿದೆ.

## ಸಮಾಜವಾದಿ ರಾಷ್ಟ್ರ

1976 ರಲ್ಲಿ 42ನೇ ತಿದ್ದುಪಡಿ ಮಾಡಿ ಪ್ರಸ್ತಾವನೆಗೆ ಸಮಾಜವಾದಿ ಎಂಬ ಪದವನ್ನು ಸೇರಿಸಲಾಯಿತು. ಭಾರತವನ್ನು ಸಮಾಜವಾದಿ ರಾಷ್ಟ್ರವಾಗಿ ಮಾಡುವುದು ಇದರ ಉದ್ದೇಶ ಶ್ರೀಮಂತ ಬಡವರ ನಡುವೆ ಅಂತರ ತಗ್ಗಿಸಿ ಎಲ್ಲರಿಗೂ ಸಮಾನ ಅವಕಾಶಗಳನ್ನು ನೀಡುವ ಮೂಲಕ ಭಾರತ ಸಮಾಜ ವಾದವನ್ನು ಅನುಸರಿಸಿದೆ ರಾಜ್ಯ ನಿರ್ದೇಶಕ ತತ್ವಗಳ ಮೂಲಕ ನಮ್ಮ ಸಂವಿಧಾನ ರಚನಕಾರರು ಸಮಾಜವಾದಿ ರಾಷ್ಟ್ರ ನಿರ್ಮಾಣ ಬಹುತ್ವ ಭಾರತ ಮತ್ತು ವ್ಯಕ್ತಿ ಘನತೆ ಎತ್ತಿ ಹಿಡಿಯುವ ಗುರಿ ಹೊಂದಿದೆ .

## ಜಾತ್ಯಾತೀತ ರಾಷ್ಟ್ರ

ಜಾತ್ಯಾತೀತ ಎಂದರೆ ಜಾತಿ ಅಥವಾ ಧರ್ಮದ ವಿಷಯದಲ್ಲಿ ರಾಜ್ಯ ತಟಸ್ಥವಾಗಿರುವುದು. ಇದನ್ನೇ ಧರ್ಮ ನಿರಪೇಕ್ಷ ಎನ್ನುವರು. ಭಾರತವು ವಿವಿಧ ಧರ್ಮಗಳ ನಾಡು. ಹಿಂದೂ ಕ್ರೈಸ್ತ, ಮುಸ್ಲಿಂ,ಜೈನ ಮತ್ತು ಬೌದ್ಧ ಮುಂತಾದ ಧರ್ಮಗಳು ಇಲ್ಲಿವೆ ಈ ಯಾವುದೋ ಧರ್ಮದ ಪರ ಅಥವಾ ವಿರೋಧವಾಗಿರದೆ ಎಲ್ಲಾ ಧರ್ಮಗಳನ್ನು ಗೌರವಿಸಿ ಸರ್ವಧರ್ಮ ಸಮನ್ವಯ ನೀತಿ ಅಡಿಯಲ್ಲಿ ಸಂವಿಧಾನವನ್ನು ರಚಿಸಲಾಗಿದೆ .

ಪದ್ಯ ನಾವು ಭಾರತೀಯರು ಎಂಬ ಭಾವ ಮೂಡಲಿ

೧. ಪದ್ಯ { ನಾವೇಲ್ಲ ಭಾರತೀಯರೆಂಬ } ಪ್ರಶ್ನೆಗಳು ಮತ್ತು

ಚರ್ಚೆ https://www.youtube.com/watch?v=iW4KQ4rSwqA

https://www.youtube.com/watch?v=IzpkhLuAu-s

ವಿಡಿಯೋ ಕ್ಲಿಪ್ ಅಂಶಗಳನ್ನು ಚರ್ಚಿಸಿ

ಭಾರತವು ಒಂದು ಪ್ರಜಾಸತ್ತಾತ್ಮಕ ರಾಷ್ಟ್ರವಾಗಿದೆ. ಹೇಗೆಂದರೆ ಇಲ್ಲಿ ಜನರೇ ಪ್ರಜೆಗಳಾಗಿದ್ದಾರೆ ಪ್ರಜೆಗಳೇ ತಮ್ಮ ಪ್ರತಿನಿಧಿಗಳ ಮೂಲಕ ತಮಗೆ ಬೇಕಾದ ಸರ್ಕಾರವನ್ನು ತಾವೇ ಆರಿಸಿಕೊಳ್ಳುತ್ತಾರೆ ಬೇಡವಾದ ಸರ್ಕಾರವನ್ನು ಬದಲಿಸುವ ಅಧಿಕಾರ ಹೊಂದಿದ್ದಾರೆ ಸಾರ್ವಜನಿಕ ನೀತಿಯ ಬಗ್ಗೆ ನಿರ್ಣಯಗಳನ್ನು ತೆಗೆದುಕೊಳ್ಳುವ ಅಧಿಕಾರ ಜನತೆಗಿದೆ ಒಟ್ಟಾರೆ ಇಲ್ಲಿ ಜನರಿಂದ ಜನರಿಗಾಗಿ ಜನರ ಸರ್ಕಾರವಿದೆ. ಭಾರತದ ಸಂವಿಧಾನ ಜಾತಿ ಧರ್ಮ ಲಿಂಗ ಆಸ್ತಿ ಅಂತಸ್ತು ಎಂಬ ತಾರತಮ್ಯವಿಲ್ಲದೆ ಎಲ್ಲರೂ ಕೂಡ ಮತದಾನ ಮಾಡುವ ಅವಕಾಶ ನೀಡಿದೆ

ಗಣರಾಜ್ಯ

ಜನತಾ ಪರಮಾಧಿಕಾರವುಳ್ಳ ರಾಷ್ಟ್ರವೇ ಗಣರಾಜ್ಯ ರಾಜ್ಯದ ಮುಖ್ಯಸ್ಥ ಅಥವಾ ರಾಷ್ಟ್ರಪತಿ ಚುನಾಯಿತ ವ್ಯಕ್ತಿಯಾಗಿದ್ದು ಅವರು ಜನರಿಂದ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಚುನಾಯಿತಾಗುತ್ತಾರೆ ರಾಷ್ಟ್ರಪತಿ ಅನುವಂಶಿಕ ರಾಜನಲ್ಲ ಭಾರತದಲ್ಲಿ ಅನುವಂಶಿಕ ರಾಜ ಪ್ರಭುತ್ವ ಇಲ್ಲವಾದ್ದರಿಂದ ಭಾರತವು ಗಣರಾಜ್ಯವಾಗಿದೆ .

ಗುಂಪು ಚಟುವಟಿಕೆ
ಸಾರ್ವತ್ರಿಕ ಚುನಾವಣೆಗಳು ಏಕೆ ಬೇಕು? ಚರ್ಚಿಸಿ ಬರೆಯಿರಿ

ಸಾಮಾಜಿಕ ನ್ಯಾಯಎಂದರೆ ಜಾತಿ, ಮತ, ಲಿಂಗಭೇದವಿಲ್ಲದೆ ನಾಗರಿಕರನ್ನು ಸಮಾನವಾಗಿ ಕಂಡು ಗೌರವಿಸುವುದು ಅಂದರೆ ಅಸಮಾನತೆ ಹೋಗಲಾಡಿಸುವುದು. ಆರ್ಥಿಕ ನ್ಯಾಯಎಂದರೆ ಬಡವ ಮತ್ತು ಶ್ರೀಮಂತರ ನಡುವೆ ಅಂತರ ಅಳಿಸಿ ಸಂಪತ್ತನ್ನು ಸಮಾನವಾಗಿ ಹಂಚಿಕೆ ಮಾಡುವುದು .  ರಾಜಕೀಯ ನ್ಯಾಯಎಂದರೆರಾಜಕೀಯ ಪ್ರಕ್ರಿಯೆಯಲ್ಲಿ ಎಲ್ಲಾ ಜನರಿಗೂ ಸಮಾನವಾದ ಹಕ್ಕು ಪ್ರಾತಿನಿಧ್ಯ ಕೊಡುವುದು ಗುಂಪು.

ಚಟುವಟಿಕೆ
ಭಾರತೀಯ ಸಂವಿಧಾನ ಭಾರತೀಯ ಪ್ರಜೆಗಳಿಗೆ ಒದಗಿಸಿದ ಸೌಲಭ್ಯ ಮತ್ತು ಅವಕಾಶಗಳನ್ನು ಪಟ್ಟಿ ಮಾಡಿ

ಸ್ವಾತಂತ್ರ್ಯ ಎಂದರೆವ್ಯಕ್ತಿಯ ಸರ್ವಾಂಗೀಣ ಪ್ರಗತಿಗೆ ಸ್ವಾತಂತ್ರ್ಯ ಭಾರತ ಸಂವಿಧಾನವು ಎಲ್ಲಾ ನಾಗರಿಕರಿಗೆ ಅಭಿವ್ಯಕ್ತಿ ವಿಚಾರ ವಿಶ್ವಾಸ, ನಂಬಿಕೆ, ಆರಾಧನಾ ಸ್ವಾತಂತ್ರ್ಯಗಳನ್ನು ನೀಡಿದೆ . ಸಮಾನತೆ ಎಂದರೆ ಸ್ಥಾನಮಾನ ಮತ್ತು ಅವಕಾಶಗಳಲ್ಲಿ ಸಮಾನತೆ ನೀಡುವುದು ಕಾನೂನಿನ ಮುಂದೆ ಎಲ್ಲರೂ ಸಮಾನರು ಉದ್ಯೋಗಗಳ ನೀಡಿಕೆಯಲ್ಲಿ ಸಮಾನತೆ ರಾಜಕೀಯ ಪ್ರಾತಿನಿಧ್ಯತೆಯಲ್ಲಿ ಸಮಾನ ಅವಕಾಶಗಳನ್ನು ನೀಡಲಾಗಿದೆ ಈ ವಿಚಾರದಲ್ಲಿ ಜಾತಿ, ಧರ್ಮ, ಲಿಂಗ, ಬಡವ, ಶ್ರೀಮಂತ ನಿರ್ಬಂಧಗಳನ್ನು ನಿಷೇಧಿಸಲಾಗಿದೆ

ಚಟುವಟಿಕೆ
ಸಮಾನತೆಯನ್ನು ಮೂಡಿಸಲು ಶಾಲಾ ಹಂತದಲ್ಲಿ ಕೈಗೊಳ್ಳಬಹುದಾದ ಚಟುವಟಿಕೆಗಳ ಬಗ್ಗೆ ಚರ್ಚಿಸಿ

ಭ್ರಾತೃತ್ವ

ವ್ಯಕ್ತಿ ಗೌರವ ರಾಷ್ಟ್ರದ ಏಕತೆ ಮತ್ತು ಸಮಗ್ರತೆಯನ್ನು ಗೌರವಿಸುವುದೇ ಭ್ರಾತೃತ್ವ. ಇವೆರಡು ಒಂದಕ್ಕೊಂದು ಪೂರಕವಾಗಿದ್ದು ಸೋದರತ್ವ ಭಾವನೆ ಗೌರವವನ್ನು ಆಧರಿಸಿದೆ. ಆದ್ದರಿಂದ ಪ್ರತಿಯೊಬ್ಬ ವ್ಯಕ್ತಿಯೂ ಪ್ರಾಮುಖ್ಯ ಧಾರ್ಮಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಭಾರತ ರಾಷ್ಟ್ರದಲ್ಲಿ ಕೋಮು ಭಾವನೆ ಹಾಗೂ ಪ್ರತ್ಯೇಕತೆ ಭಾವನೆ ನಿವಾರಿಸಲು ನಮ್ಮ ಸಂವಿಧಾನದಲ್ಲಿ ಪೂರ್ವ ಪೀಠಿಕೆಯಲ್ಲಿ ಭಾವನೆ ಬೆಳೆಸಿ ದೇಶದ ಏಕತೆ ಮತ್ತು ಸಮಗ್ರತೆಯನ್ನು ಕಾಪಾಡುವ ಅಗತ್ಯತೆಯನ್ನು ಒತ್ತಿ ಹೇಳಲಾಗಿದೆ ಭಾರತೀಯರೆಲ್ಲಾ ಸೋದರರು ಎಂದು ಪ್ರತಿಪಾದಿಸಲಾಗಿದೆ.

ಚಟುವಟಿಕೆ
ಕಡ್ಡಾಯ ಮತದಾನ ಏಕೆ ಮಾಡಬೇಕು ಚರ್ಚಿಸಿ

ಪ್ರಶ್ನೆ
ಮತದಾನದ ಪ್ರಮಾಣ ಹೆಚ್ಚಿಸಲು ಶಾಲಾ ಕಾಲೇಜುಗಳಲ್ಲಿ ಇ ಎಲ್ ಸಿ ಕ್ಲಬ್ ಗಳು ಹೇಗೆ ಸಹಾಯಕವಾಗಿದೆ.?

## ಏಕ ಪೌರತ್ವ

ಭಾರತದಲ್ಲಿ ಅನೇಕ ಜಾತಿ ಧರ್ಮ ಜನಾಂಗಗಳಿದ್ದು ಎಲ್ಲರಲ್ಲೂ ಕೂಡ ಏಕತೆ ಮತ್ತು ಸೋದರತ್ವ ಮೂಡಿಸುವ ಉದ್ದೇಶದಿಂದ ಭಾರತ ಸಂವಿಧಾನದ ಅಡಿ ಏಕ ಪೌರತ್ವವನ್ನು ಜಾರಿಗೆ ತರಲಾಯಿತು

> ಗುಂಪು ಚಟುವಟಿಕೆ
>
> ಏಕ ಪೌರತ್ವವು ಭಾರತೀಯರಲ್ಲಿ ಐಕ್ಯತೆಯನ್ನು ಮೂಡಿಸುವಲ್ಲಿ ಹೇಗೆ ಸಹಾಯಕವಾಗಿದೆ ಚರ್ಚಿಸಿ
>
> ಪ್ರಮುಖ ಅಂಶಗಳನ್ನು ಪಟ್ಟಿ ಮಾಡಿ

## ಮೂಲಭೂತ ಹಕ್ಕುಗಳು

ವ್ಯಕ್ತಿಯ ವ್ಯಕ್ತಿತ್ವದ ವಿಕಸನಕ್ಕೆ ಅಗತ್ಯವಾದ ಸಾಮಾಜಿಕ ಸ್ಥಿತಿಗಳನ್ನು ಮೂಲಭೂತ ಹಕ್ಕುಗಳು ಎಂದು ಕರೆಯುತ್ತಾರೆ ಸಮಾಜದಲ್ಲಿ ಮನುಷ್ಯನು ನಾಗರಿಕ ಜೀವನ ನಡೆಸಲು ಮೂಲಭೂತ ಹಕ್ಕುಗಳು ಅವಶ್ಯಕ ಈ ಹಕ್ಕುಗಳು ಪ್ರಜಾಪ್ರಭುತ್ವದ ಯಶಸ್ಸಿಗೆ ಅಗತ್ಯವಾದವುಗಳು ನಮ್ಮ ಸಂವಿಧಾನದ ಮೂರನೇ ಭಾಗದಲ್ಲಿ ಆರು ಮೂಲಭೂತ ಹಕ್ಕುಗಳನ್ನು ಅಳವಡಿಸಲಾಗಿದೆ.

> ಮೂಲಭೂತ ಹಕ್ಕುಗಳ ಚಾರ್ಟ್
>
> ಚಟುವಟಿಕೆ
>
> ವ್ಯಕ್ತಿಯ ವ್ಯಕ್ತಿತ್ವದ ವಿಕಸನಕ್ಕೆ ಮೂಲಭೂತ ಹಕ್ಕುಗಳು ಹೇಗೆ ಸಹಕಾರಿಯಾಗಿದೆ ಚರ್ಚಿಸಿ
>
> ಶೋಷಣೆಯನ್ನು ತಪ್ಪಿಸಲು ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಕಾಯ್ದೆಗಳನ್ನು ಪಟ್ಟಿ ಮಾಡಿ (9ನೇ ತರಗತಿ ಸಮಾಜ ವಿಜ್ಞಾನ ಭಾಗ ಒಂದು ಪಠ್ಯ ಪುಸ್ತಕ **2024 )**

## ಮೂಲಭೂತ ಕರ್ತವ್ಯಗಳು

ಹಕ್ಕು ಮತ್ತು ಕರ್ತವ್ಯಗಳು ಒಂದೇ ನಾಣ್ಯದ ಎರಡು ಮುಖಗಳು ಕರ್ತವ್ಯ ರಹಿತ ಹಕ್ಕುಗಳಿಗೆ ಪ್ರಾಮುಖ್ಯತೆ ಯಾಗಲಿ ಮೌಲ್ಯವಾಗಲಿ ಇರುವುದಿಲ್ಲ ಆದ್ದರಿಂದ ವ್ಯಕ್ತಿಯ ವ್ಯಕ್ತಿತ್ವದ ವಿಕಾಸಕ್ಕೆ ಮೂಲಭೂತ ಹಕ್ಕುಗಳು ಹೇಗೆ ಸಹಕಾರಿಯಾಗಿದೆಯೋ ಹಾಗೆಯೇ ಬಹುತ್ವ ಭಾರತದಲ್ಲಿ ಪ್ರತಿಯೊಬ್ಬ ಭಾರತೀಯರು ಮೂಲಭೂತ ಕರ್ತವ್ಯಗಳನ್ನು ಪಾಲಿಸಬೇಕು

> ಗುಂಪು ಚಟುವಟಿಕೆ
>
> ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳನ್ನು ಪಟ್ಟಿ ಮಾಡಿ
>
> ಬಹುತ್ವ ಭಾರತದ ಕಲ್ಪನೆಯಲ್ಲಿ ವ್ಯಕ್ತಿ ಘನತೆಯನ್ನು ಕಾಪಾಡಲು ಹೇಗೆ ಸಹಕಾರಿಯಾಗಿದೆ.?

ಸ್ವತಂತ್ರ ಮತ್ತು ಏಕೀಕೃತ ನ್ಯಾಯಾಂಗ ವ್ಯವಸ್ಥೆ ನಮ್ಮ ನ್ಯಾಯಾಂಗ ವ್ಯವಸ್ಥೆ ಸ್ವತಂತ್ರವಾದದ್ದು ಮತ್ತು ಏಕೀಕೃತವಾದದ್ದು ಆಗಿದೆ ಪ್ರಜೆಗಳ ಹಕ್ಕುಗಳನ್ನು ರಕ್ಷಿಸಿ ನಿರ್ಭಯವಾಗಿ ಕೆಲಸ ಮಾಡಲು ನ್ಯಾಯಾಲಯಗಳು ಸ್ವಾತಂತ್ರ್ಯ ಪಡೆದಿವೆ ಶಾಸಕಾಂಗ ಮತ್ತು ಕಾರ್ಯಾಂಗಗಳು ನ್ಯಾಯಾಂಗದ ಕಾರ್ಯದಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ ಸರ್ವೋಚ್ಚ ನ್ಯಾಯಾಲಯವು ಅತ್ಯುನ್ನತ ನ್ಯಾಯಾಲಯವಾಗಿದ್ದು ಅದರ ಅಡಿಯಲ್ಲಿ ಉಚ್ಚ ನ್ಯಾಯಾಲಯಗಳು ಮತ್ತು ಅಧೀನ ನ್ಯಾಯಾಲಯಗಳು ಕಾರ್ಯನಿರ್ವಹಿಸುತ್ತವೆ.

> ಚಟುವಟಿಕೆ
>
> ಬಹುತ್ವ ಭಾರತ ಮತ್ತು ವ್ಯಕ್ತಿಘನತೆಯನ್ನು ಕಾಪಾಡುವಲ್ಲಿ ಸ್ವತಂತ್ರ ಮತ್ತು ಏಕೀಕೃತ ನ್ಯಾಯಾಂಗ ವ್ಯವಸ್ಥೆ ಹೇಗೆ ಸಹಾಯಕವಾಗಿದೆ ಚರ್ಚಿಸಿ

## ರಾಷ್ಟ್ರೀಯ ಭಾವೈಕ್ಯತೆ

ನಮ್ಮದೇಶವೇ ಒಂದು ಕುಟುಂಬ. ಈ ದೇಶದಲ್ಲಿ ವಿವಿಧ ಭಾಷೆ, ಸಂಸ್ಕೃತಿ, ಜನಾಂಗಗಳಿದ್ದು ಅವರ ನಡುವೆ ಸಮರಸ್ಯ ಮೂಡಿಸಿ ವಿವಿಧತೆಯಲ್ಲಿ ಏಕತೆ ಉಂಟುಮಾಡಲು ರಾಷ್ಟ್ರೀಯ ಭಾವೈಕ್ಯತೆ ಮೂಡಿಸುವುದು ಅಗತ್ಯವಾಗಿದೆ. ಬಹುತ್ವ ಭಾರತದಲ್ಲಿ ನಾವೆಲ್ಲ ಭಾರತೀಯರು, ನಾವೆಲ್ಲ ಒಂದೇ ಎಂಬ ಭಾವನೆ ಇರುವುದರಿಂದ ವ್ಯಕ್ತಿ ಘನತೆ ಕಾಪಾಡಿಕೊಳ್ಳಲು ಕಾರಣವಾಗಿದೆ. ಶಾಲಾ ಕಾಲೇಜುಗಳಲ್ಲಿ ವಿಭಿನ್ನ ಧರ್ಮ ಸಂಸ್ಕೃತಿ ಜನಾಂಗಗಳ ಬಗ್ಗೆ ಗೌರವ ಭಾವನೆ ಮೂಡಿಸುವಲ್ಲಿ ಬಹುತ್ವ ಭಾರತದ ಕಲ್ಪನೆ ಅವಶ್ಯಕ.

**ಚಟುವಟಿಕೆ**

ಸಂವಿಧಾನವಿಲ್ಲದಿದ್ದರೆ ಬಹುತ್ವ ಭಾರತ ಮತ್ತು ವ್ಯಕ್ತಿ ಗಣತಿ ಕಾಪಾಡಿಕೊಳ್ಳಲು ಸಾಧ್ಯವಾಗುತ್ತಿತ್ತೇ ? ಚರ್ಚಿಸಿ.

ಒಟ್ಟಾರೆಯಾಗಿ ಈ ಮೇಲಿನ ಸಂವಿಧಾನದ ಎಲ್ಲಾ ತತ್ವಗಳು ವಿವಿಧ ಭಾಷೆ ಧರ್ಮ ಜನಾಂಗ ಪ್ರದೇಶ ಸಂಸ್ಕೃತಿ ಆಚಾರ ವಿಚಾರಗಳನ್ನು ಹೊಂದಿದ ಭಾರತವು ಅನನ್ಯತೆ ವ್ಯಕ್ತಿಘನತೆಯನ್ನು ಹೊಂದಲು ಮತ್ತು ಬಹುತ್ವವನ್ನು ಕಾಪಾಡಲು ಸಹಾಯಕವಾಗಿದೆ. ರಾಜ್ಯ ನೀತಿ ನಿರ್ದೇಶಕ ತತ್ವಗಳು ಬಹುತ್ವ ಭಾರತದಲ್ಲಿ ಸುಖಿ ರಾಜ್ಯದ ಕಲ್ಪನೆಯಿಂದ ರಾಜ್ಯನೀತಿ ನಿರ್ದೇಶಕ ತತ್ವಗಳನ್ನು ಸಂವಿಧಾನದಲ್ಲಿ ಅಳವಡಿಸಲಾಗಿದೆ. ಸಾಮಾಜಿಕ ನ್ಯಾಯ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಬಹುತ್ವ ಭಾರತದಲ್ಲಿ ವ್ಯಕ್ತಿ ಘನತೆಯನ್ನು ಎಲ್ಲಾ ಪೌರರಿಗೂ ದೊರಕಿಸಿಕೊಡಲು ಸಹಾಯಕವಾಗಿದ

## ಆಧಾರ ಗ್ರಂಥಗಳು


- **ಭಾರತ ಸಂವಿಧಾನ ಮತ್ತು ರಾಜಕೀಯ –ಕೆಎನ್ ಅಶ್ವತ್ಥ್ 2016**
- **ಭಾರತ ಸಂವಿಧಾನ – ಹೆಚ್ ಡಿ ವಿಶ್ವನಾಥ್ 2017**
- **8 & 9ನೇ ತರಗತಿ ಸಮಾಜ ವಿಜ್ಞಾನ ಪಠ್ಯಪುಸ್ತಕ 2024**
- **ಗೂಗಲ್ ಮತ್ತು ಯೂಟ್ಯೂಬ್ ಮಾಹಿತಿ**
- **ಭಾರತೀಯ ಸಮಾಜ ಶಾಸ್ತ್ರ ಮತ್ತು ಸಾಮಾಜಿಕ ಚಿಂತನೆ – ಶಂಕರಾವ್ .ಚ.ನ.**
- **ಭಾರತೀಯ ಇತಿಹಾಸ –ಪಾಲಾಕ್ಷ**
- **ಭಾರತೀಯ ಸಾಂಸ್ಕೃತಿಕ ಚಿಂತನೆ – ಡಿ.ಟಿ.ಜೋಶಿ**
- **ಉದಯೋನ್ಮುಖ ಭಾರತದಲ್ಲಿ ಶಿಕ್ಷಣ ಮತ್ತು ತತ್ವಶಾಸ್ತ್ರದ ಬುನಾದಿಗಳು – ಎನ್.ಬಿ.ಕೊಂಗವಾಡ್**
- **ಮಹಾತ್ಮ ಜ್ಯೋತಿಬಾ ಫುಲೆ**
- **ಬನ್ನಿ ಚಿನ್ನ ಸಮುದಾಯ ಗೀತೆಗಳು –ಗಂಗಾಧರ ನಂದಿ**

ಸಂವಿಧಾನದ ಆಶಯ ಮತ್ತು ಜಾಗತಿಕ ಚಿಂತನೆಗಳಿಗೆ ಅನುಗುಣವಾಗಿ ಶಾಲಾ ಮಟ್ಟದಲ್ಲಿ ಸ್ವಾಯತ್ತತೆ ಹಾಗೂ ಸ್ವಯಂ ಆಡಳಿತವನ್ನು ತರಲು ಶಿಕ್ಷಣಾಧಿಕಾರಿಗಳ ಮನೋಭಾವ, ದೃಷ್ಟಿಕೋನ ಹಾಗೂ ಆಚರಣೆಗಳಲ್ಲಿ ಬದಲಾವಣೆಗಳನ್ನು ತರಬೇಕು. ಈ ಬದಲಾವಣೆ ತರಲು ಅಗತ್ಯವಾದ ಸಾಮರ್ಥ್ಯಾಭಿವೃದ್ಧಿ ಮಾಡುವ ಸಂಸ್ಥೆ 'ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ'.





ಉತ್ತಮ ನಾಯಕರು ಮತ್ತಷ್ಟು ನಾಯಕರನ್ನು ರೂಪಿಸುತ್ತಾರೆ, ಹಿಂಬಾಲಕರನ್ನಲ್ಲ. – ರಾಲ್ಫ್ ನಾಡರ್.


ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ, ಕರ್ನಾಟಕ (SISLEP)
ಡಯಟ್ ಆವರಣ, ಕಾಲೇಜು ರಸ್ತೆ, ಧಾರವಾಡ – 580008

ದೂರವಾಣಿ ಸಂಖ್ಯೆ : 0836-2441129
ಇ-ಮೇಲ್ : sislepdirector.dwd@gmail.com